# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 82 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.09.2024 • ಮಂಗಳವಾರ • ಪುಟ:04 • ಬೆಲೆ:2

Volume:02 • Issue: 82 • PRGI No:KARKAN/2023/88055 • VIJAYANAGARA • 24.09.2024 • Tuesday • Page:04 • Rs:2








ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


# ಬಂದ ಪುಟ್ಟ ಹೋದ ಪುಟ್ಟ

## ವಿಜಯನಗರ ಜಿಲ್ಲೆಯ ರೈತರಿಗಿಲ್ಲ ಸಿಹಿ ಸಂದೇಶ | ಸಕ್ಕರೆ ಕಾರ್ಖಾನೆ ಸ್ಥಾಪನೆ ನೆನೆಗುದಿಗೆ | ರೈತರ ಬೇಡಿಕೆ ಈಡೇರುವುದೆಂದು?

## ಮಲತಾಯಿ ಮಕ್ಕಳಂತಾದವೆ ವಿಜಯನಗರ–ಬಳ್ಳಾರಿ ಜಿಲ್ಲೆ? | ಎಂ.ಪಿ.ಪ್ರಕಾಶರ ಆಡಳಿತ ನೆನೆದ ಜನ | ಬೇಕಿದೆ ಸ್ಥಳೀಯರಿಗೆ ಆದ್ಯತೆ

**ಹಂಪಿ ಟೈಮ್ಸ್ ಹೊಸಪೇಟೆ**

ಬಂದ ಪುಟ್ಟ ಹೋದ ಪುಟ್ಟ ಎಂಬ ಗಾದೆ ವಿಜಯನಗರ – ಬಳ್ಳಾರಿ ಜಿಲ್ಲೆ ಉಸ್ತುವಾರಿ ಮಂತ್ರಿ ಹಾಗೂ ಮುಖ್ಯಮಂತ್ರಿಗಳಿಗೆ ಹೇಳಿ ಮಾಡಿಸಿದಂತಿದೆ. ಹೌದು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ವರ್ಷದ ಮೇಲೆ ಮೂರು ತಿಂಗಳಾಗಿದೆ ಈ ಅವಧಿಯಲ್ಲಿ ಮುಖ್ಯಮಂತ್ರಿಗಳು ವಿಜಯನಗರ ಜಿಲ್ಲೆಗೆ ಸುಮಾರು ಆರೇಳು ಬಾರಿ ಬಂದು ಹೋಗಿದ್ದಾರೆ ಆದರೆ ಜಿಲ್ಲೆಗೆ ಯಾವುದೇ ಹೊಸ ಅಭಿವೃದ್ಧಿ ಕಾರ್ಯಗಳ ಶಂಕು ಸ್ಥಾಪನೆ ಅಥವಾ ಉದ್ಘಾಟನೆ ಕಾರ್ಯಗಳನ್ನು ನೆರವೇರಿಸಸುವ ಉದ್ದೇಶಗಳಿಗೆ ಬಂದೆ ಇಲ್ಲ.. ಹಂಪಿ ಉತ್ಸವ ಉದ್ಘಾಟನೆ, ಸರ್ಕಾರಿ ಕಾಲೇಜ್ ಉದ್ಘಾಟನೆ.. ಟಿ.ಬಿ.ಡ್ಯಾಂ ಗೇಟ್ ಹಾಳಾದಾಗ ಹಾಗು ತುಂಗಭದ್ರೆಗೆ ಬಾಗಿನ ಸಮರ್ಪಿಸಲು ಬಂದು ಹೋದರು.

ಈ ಹಿಂದೆ ವಿಶೇಷ ವಿಮಾನದಲ್ಲಿ ಜಿಂದಾಲ್ ಏರ್ ಪೋರ್ಟ್‌ಗೆ ಹಾಗೂ ಹೆಲಿಕ್ಯಾಪ್ಟರ್‌ನಲ್ಲಿ ಕನ್ನಡ ವಿಶ್ವವಿದ್ಯಾಲಯದ ಹ್ಯಾಲಿಪ್ಯಾಡ್‌ಗಳಲ್ಲಿ ಲ್ಯಾಂಡ್ ಆಗಿ ಹೋಸಪೇಟೆಗೆ ಬರುತ್ತಿದ್ದರು ಆದರೆ ಈಗ ಇವುಗಳನ್ನು ಸಹ ಬಿಟ್ಟು ಕೊಪ್ಪಳದಲ್ಲಿ ಲ್ಯಾಂಡ್ ಆಗಿ ಹೊಸಪೇಟೆಗೆ ಬಂದು ಹೋಗುತ್ತಿರುವುದನ್ನು ನೋಡಿದರೆ, ವಿಜಯನಗರ ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ ಮುಖ್ಯಮಂತ್ರಿಗಳಿಗೆ ವಿಜಯನಗರ ಜಿಲ್ಲೆಯ ಮೇಲೆ ಯಾವುದೇ ಕಾಳಜಿ ವಿಶ್ವಾಸ ಇಲ್ಲದ್ದು ಎದ್ದು ಕಾಣುತ್ತಿದೆ, ಹೀಗೆಂದು ಜನರು ವಿಶ್ಲೇಷಿಸುತ್ತಿದ್ದಾರೆ.

ಜಿಲ್ಲಾ ಕೇಂದ್ರ ಹೊಸಪೇಟೆಯ ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮದೇ ಕಾಂಗ್ರೆಸ್ ಶಾಸಕ ಎಚ್.ಆರ್.ಗವಿಯಪ್ಪ ಇದ್ದರು ಅವರನ್ನು ಕೈ ಬಿಟ್ಟು ಕೊಪ್ಪಳದ ಶಾಸಕ, ಲೋಕಸಭಾ ಸದಸ್ಯರು ಹಾಗೂ ಉಸ್ತುವಾರಿ ಸಚಿವರ ಬಗ್ಗೆಯೇ ಮುಖ್ಯಮಂತ್ರಿಗಳಿಗೆ ತುಸು ಹೆಚ್ಚು ವಿಶ್ವಾಸವಿದ್ದಂತೆ ಕಾಣುತ್ತದೆ. ಜಿಲ್ಲೆಯ ಹಲವಾರು ಸಂದರ್ಭಗಳಲ್ಲಿ ಇದು ಸ್ಪಷ್ಟವಾಗಿದೆ. ತುಂಗಭದ್ರೆಗೆ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸುವ ಸಂದರ್ಭದಲ್ಲಿ ವಿಜಯನಗರದ ಶಾಸಕರು ಟಿಬಿಡ್ಯಾಂವರೆಗೂ ಬಂದಿದ್ದರು. ಜೀವನದಿಯನ್ನೆ ಅವಲಂಬಿಸಿದ ರೈತ ಬೆಂಬಲಿಗರನ್ನು ಪೊಲೀಸರು ಒಳಗೆ ಬಿಡುತ್ತಿಲ್ಲ ಎಂದು ಅಸಮಾಧಾನದಿಂದ ಸಿಎಂರನ್ನು ಸ್ವಾಗತಿಸಿ, ಬಾಗಿನ ಅರ್ಪಣೆ, ಕಾರ್ಯದಲ್ಲಿ ಪಾಲ್ಗೊಳ್ಳದೆ ಹಿಂದಿರುಗಿದ್ದು ಕಾಂಗ್ರೆಸ್ ಪಕ್ಷದ ಶಾಸಕರು ಉಸ್ತುವಾರಿ ಮಂತ್ರಿ ಹಾಗೂ ಮುಖ್ಯಮಂತ್ರಿಗಳಲ್ಲಿ



ಹೊಂದಾಣಿಕೆ ಇಲ್ಲ ಎನ್ನುವುದು ಎದ್ದು ಕಾಣುತ್ತಿತ್ತು. ಜಿಲ್ಲಾ ಉಸ್ತುವಾರಿ ಮಂತ್ರಿಗೂ ವಿಜಯನಗರದ ಶಾಸಕರಿಗೆ ಅಷ್ಟಕ್ಕಷ್ಟೇ ಎನ್ನುವಂತಾಗಿದೆ, ಅಷ್ಟೇ ಅಲ್ಲ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಇತರರೊಂದಿಗೆ ಉಸ್ತುವಾರಿ ಮಂತ್ರಿಗಳು ಒಡನಾಟ ಅಷ್ಟಕಷ್ಟೆ ಹೀಗಾಗಿ ತಮ್ಮದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಕಾಂಗ್ರೆಸ್ ಕಾರ್ಯಕರ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಿದ್ದ ಉಸ್ತುವಾರಿ ಸಚಿವರು ಇತ್ತೀಚಿಗಂತೂ ಮುಖ್ಯಮಂತ್ರಿಗಳು ಬಂದಾಗ ಅವರ ಜೊತೆಗೆ ಬಂದು ಹೋಗುತ್ತಿರುವುದು ನೂತನ ಜಿಲ್ಲೆ ವಿಜಯನಗರ ಜಿಲ್ಲೆ ಜನರ ದುರಾದೃಷ್ಟವೇ ಸರಿ ಎನ್ನಲಾಗುತ್ತಿದೆ. ಎಂಪಿ ಪ್ರಕಾಶ್ ನಂತರ ಸಮಗ್ರ ಜಿಲ್ಲೆಯನ್ನು ಯಾರು ಪ್ರತಿನಿಧಿಸುವಂಥವರೇ ಇಲ್ಲದಂತಾಗಿದೆ. ಈ ಹಿಂದೆ ಕಳೆದ ಎರಡು ಮೂರು ದಶಕಗಳಲ್ಲಿ ಉಸ್ತುವಾರಿ ಸಚಿವರಾಗಿದ್ದ ಎಂಪಿ ಪ್ರಕಾಶ್ ಅವರು ಇಡೀ ಜಿಲ್ಲೆಯ ಎಲ್ಲಾ ಜಾತಿ, ಧರ್ಮಗಳನ್ನು, ಎಲ್ಲ ರಾಜಕೀಯ ನಾಯಕರು, ಜನಸಾಮಾನ್ಯರನ್ನು ಪ್ರತಿನಿಧಿಸಿ ಜನರಿಗೆ ಸ್ಪಂದಿಸುತ್ತಿದ್ದರು. ರಾಜಕೀಯ ನಾಯಕರು ಅಷ್ಟೇ ಅಲ್ಲ ಪ್ರತಿ ಊರಿನ ಜನಸಾಮಾನ್ಯರನ್ನು ಬಲ್ಲ ಮುತ್ಸದ್ದಿ ರಾಜಕಾರಣಿಯಾಗಿದ್ದರು ಎಂ ಪಿ ಪ್ರಕಾಶ್. ಜನಸಾಮಾನ್ಯರು ಸಹ ಕಂಡು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಿದ್ದರು ಅವರ ನಂತರ ಬಂದ ಪಿ.ಟಿ. ಪರಮೇಶ್ವರ ನಾಯ್ಕ, ಆನಂದ್ ಸಿಂಗ್, ಶ್ರೀರಾಮುಲು, ನಾಗೇಂದ್ರ ಮೊದಲಾದವರು ತಮ್ಮ ಕ್ಷೇತ್ರಗಳಿಗೆ ಅಷ್ಟೇ ಮಂತ್ರಿಗಳಾದರೆ ಹೊರತು ಇಡೀ ಜಿಲ್ಲೆಗೆ ಮಂತ್ರಿಗಳೆಂದು ಜನರಿಗೆ ಅನಿಸಲೇ ಇಲ್ಲ. ಎಂಪಿ ಪ್ರಕಾಶರಂತ ಇಡೀ ಜಿಲ್ಲೆಯನ್ನು ಪ್ರತಿನಿಧಿಸುವ ಪ್ರಭುದ್ಧ ರಾಜಕಾರಣಿ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಅವಳಿ ಜಿಲ್ಲೆಗಳಿಗೆ ಹೆಚ್ಚು ಅವಶ್ಯಕತೆ ಇದೆ. ಎಂ.ಪಿ. ಪ್ರಕಾಶ್‌ರ ಆ ದಿನಗಳ ನೆನಪು ಜಿಲ್ಲೆಯ ಜನರನ್ನು ಸದಾ ಕಾಡುತ್ತಿದೆ.

ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಉಸ್ತುವಾರಿ ಸಚಿವರಾಗಿ ಜಿಲ್ಲೆಯ ಹೊರಗಿನ ಶಾಸಕ ಮಂತ್ರಿ ಆಗಿರುವುದರಿಂದ ಈ ಅವಳಿ ಜಿಲ್ಲೆಯ ಜನರಿಗೆ ತಮ್ಮ ಬೇಕು ಬೇಡಗಳನ್ನು ಈಡೇರಿಸಿಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವರು ಕೈಗೆ ಸಿಗದಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಇರಲಿ ಒಂದು ಜಿಲ್ಲೆಯನ್ನು ಪ್ರತಿನಿಧಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಒಬ್ಬೇ ಒಬ್ಬ ರಾಜಕೀಯ ಪ್ರತಿನಿಧಿಯು ಅವಳಿ ಜಿಲ್ಲೆಗಳಲ್ಲಿ ಇಲ್ಲದಿರುವುದು ವಿಷಾದಕರ ಸಂಗತಿ ಎನ್ನುತ್ತಾರೆ ರೈತರು.

### ಜಲಾಶಯಗಳಿಗೆ ಬಾಗಿನ ಅರ್ಪಣೆ ಬೇಕೇ?

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಲಮಟ್ಟಿ, ತುಂಗಭದ್ರ ಮೊದಲಾದ ಜಲಾಶಯಗಳಿಗೆ ಬಾಗಿನ ಅರ್ಪಣೆ ಮಾಡಿದ್ದಾರೆ. ಮೂಡ ನಂಬಿಕೆ ವಿರುದ್ಧ ಕಾಯ್ದೆ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಜಲಾಶಯಗಳಿಗೆ ಬಾಗಿನ ಅರ್ಪಿಸುವುದು ವಿಚಿತ್ರ ಎನಿಸಿದರೂ ಸತ್ಯ!. ಈ ಬಾಗಿನ ಅರ್ಪಿಸುವ ಅವಶ್ಯಕತೆ ಈ ಕಾಲಘಟ್ಟದಲ್ಲಿ ಬೇಕೆ ಎಂಬ ಪ್ರಶ್ನೆ ಬಹುತೇಕರಲ್ಲಿ ಕಾಡುತ್ತಿದೆ. ಹೌದು ಒಬ್ಬ ಮುಖ್ಯಮಂತ್ರಿಯು ಒಂದು ಜಲಾಶಯಕ್ಕೆ ಭೇಟಿ ನೀಡಬೇಕಾದರೆ ಬೆಂಗಳೂರಿನಿಂದ ಬರುವ ವಿಶೇಷ ವಿಮಾನ ಅಥವಾ ಹೆಲಿಕ್ಯಾಪ್ಟರ್, ಬಂದೋಬಸ್ತಿಗಾಗಿ ನೂರಾರು ಪೋಲಿಸ್ ಸಿಬ್ಬಂದಿಗಳು ಯೋಜನೆ, ಮೊದಲಾದ ಕಾರ್ಯಗಳಿಗೆ ಕೋಟ್ಯಾಂತರ ರೂಪಾಯಿಗಳ ವೆಚ್ಚವಾಗುತ್ತದೆ, ಇಷ್ಟೊಂದು ಕೋಟಿ ಗಟ್ಟಲೆ ಹಣವನ್ನು ವೆಚ್ಚ ಮಾಡಿ ಜಲಾಶಯಗಳಿಂದ ಅರ್ಪಿಸುವುದರಿಂದ ಆಗುವ ಲಾಭವಾದರೂ ಏನು ಎನ್ನುವ ಪ್ರಶ್ನೆ ಜನರರನ್ನು ಕಾಡುತ್ತಿದೆ.

ಸಂಪ್ರದಾಯದ ಪ್ರಕಾರ ಬಾಗಿನವನ್ನು ಮುತ್ತೈದೆಯರು, ಮುತ್ತೈದೆಯರಿಗೆ ಕೊಡುವಂತ ಸಂಪ್ರದಾಯ. ಈ ಹಿಂದೆ ನದಿಗಳು, ಕೆರೆಗಳು ತುಂಬಿದಾಗ ಮುತ್ತೈದೆಯರು ಬಾಗಿನ ಅರ್ಪಿಸುವ ಪರಂಪರೆ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ರೈತ ಮಹಿಳೆಯರ ಬದಲಿಗೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಮಂತ್ರಿಗಳು, ರಾಜಕಾರಣಿಗಳು ಜಲಾಶಯಗಳಿಗೆ ಬಾಗಿನು ಅರ್ಪಿಸುವುದು ಪ್ಯಾಷನ್ ಆಗಿ ಪರಿವರ್ತನೆ ಆಗುತ್ತಿದೆ. ಇನ್ನು ಮುಂದೆ ಮುಖ್ಯಮಂತ್ರಿಗಳ ಬದಲು ಸ್ಥಳೀಯ ರೈತರು, ಮಹಿಳಾ ಸಂಘ ಸಂಸ್ಥೆಗಳು, ಮಠದ ಸ್ವಾಮೀಜಿಗಳು ನೇತೃತ್ವದಲ್ಲಿ ಜಲಾಶಯಗಳಿಗೆ ಬಾಗಿನ ಅರ್ಪಿಸುವುದು ಸೂಕ್ತ ಎಂಬ ಮಾತುಗಳು ಬಲವಾಗಿ ಕೇಳಿ ಬರುತ್ತಿವೆ. ಹೀಗಾದರೆ ಸರ್ಕಾರಿ ಕಚೇರಿಗಳಲ್ಲಿ ಜನಸಾಮಾನ್ಯರಿಗೆ ಅಧಿಕಾರಿಗಳು ಭೇಟಿಗೆ ದೊರೆಯುತ್ತಾರೆ. ಇಲ್ಲಿದಿದ್ದರೆ ಮಂತ್ರಿಗಳ ಆಗಮನದ ಸಿದ್ಧತೆಯಲ್ಲಿ ತೊಡಗಿಸಿಕೊಂಡು ಜನರ ಕೈಗೆ ಅಧಿಕಾರಿಗಳು ದೊರೆಯುವುದು ಕಷ್ಟಸಾಧ್ಯ.

## ಮೈಕ್ರೋ ನ್ಯೂಸ್

### ವಲಸೆ ಕುರಿಗಾಹಿಗಳಿಗೆ ಗುರುತಿನ ಚೀಟಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದಲ್ಲಿ ಜಿಲ್ಲೆಯ ವಲಸೆ ಕುರಿಗಾಹಿಗಳಿಗೆ ಗುರಿತಿನ ಚೀಟಿ ನೀಡಲು ಆರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಲಾಗಿದೆ.

ಅರ್ಜಿ ಸಲ್ಲಿಸುವ ಅರ್ಜಿದಾರರು ಕನಿಷ್ಠ 20 ಕುರಿಗಳನ್ನು ಹೊಂದಿರಬೇಕು. ನಿಗದಿಪಡಿಸಿದ ಅರ್ಜಿ ನಮೂನೆಯನ್ನು ತಮ್ಮ ವ್ಯಾಪ್ತಿಯ ಪಶುಆಸ್ಪತ್ರೆ ಅಥವಾ ಹೊಸಪೇಟೆ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ನಿಗದಿತ ದಾಖಲೆಯೊಂದಿಗೆ ಸಲ್ಲಿಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ಕಚೇರಿಗೆ ಅಥವಾ ದೂ.ಸಂ: 08394225129ಗೆ ಸಂಪರ್ಕಿಸಬಹುದು ಎಂದು ನಿಗಮದ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

### ಮೀನುಮರಿಗಳ ಮಾರಾಟ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮೀನುಗಾರಿಕೆ ಇಲಾಖೆಯಿಂದ 2024–25ನೇ ಸಾಲಿನ ವಿವಿಧ ಯೋಜನೆಗಳ ಅಡಿ ಮೀನು ಸಾಕಾಣಿಕೆ ಮಾಡುವವರಿಗೆ ಉತ್ತಮ ತಳಿಯ ಮೀನುಮರಿಗಳನ್ನು ಸರಬರಾಜು ಮಾಡುಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರ ನಿಗದಿಪಡಿಸಿರುವ ದರದಲ್ಲಿ (ಸಾಗಣಿಕೆ ವೆಚ್ಚ ಸೇರಿ) ಅನ್ಮದಾನದ ಲಭ್ಯತೆಗೆ ಅನುಗುಣವಾಗಿ ಮೀನುಮರಿಗಳನ್ನು ಸರಬರಾಜು ಮಾಡಲು ಮೀನುಗಾರಿಕೆ ಇಲಾಖೆಯಲ್ಲಿ ನೋಂದಾಯಿಸಿರುವ ಆಸಕ್ತ ಮೀನುಮರಿ ಸಾಕಾಣಿಕೆದಾರರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಸೆಪ್ಟಂಬರ್ 29 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ವಲಯ, ತಾಲೂಕು ಮತ್ತು ಜಿಲ್ಲಾ ಮಟ್ಟದ ಮೀನುಗಾರಿಕೆ ಇಲಾಖೆಯ ಕಚೇರಿಗೆ ಭೇಟಿ ನೀಡಬಹುದು ಅಥವಾ ಇಲಾಖೆಯ ವೆಬ್‌ಸೈಟ್ ಆದ www.fisheries.karnataka.gov.in ಗೆ ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

### ಬಿ.ನಾಗರಾಜಗೆ ಪಿಎಚ್.ಡಿ ಪದವಿ ಪ್ರಧಾನ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಬ್ಯಾಲಾಳು ಗ್ರಾಮದ ಸಂಶೋಧನಾ ವಿದ್ಯಾರ್ಥಿ ಬಿ.ನಾಗರಾಜ್ ರಿಗೆ ಆಂಧ್ರ ಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಕನ್ನಡ



ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದಿಂದ ಅವರು ಮಂಡಿಸಿದ 'ಕೊ.ಚೆನ್ನಬಸಪ್ಪನವರ ಕಾದಂಬರಿಗಳು ಒಂದು ಅಧ್ಯಯನ' ಎಂಬ ಪ್ರೌಢ ಪ್ರಬಂಧಕ್ಕೆ ದ್ರಾವಿಡ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ಪ್ರದಾನ ಮಾಡಿದೆ. ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಜಯಲಲಿತರವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧ ವನ್ನು ಸಿದ್ದಪಡಿಸಿದ್ದರು. ಪ್ರಸ್ತುತ ಇವರು ಹರಪನಹಳ್ಳಿಯ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ವಸತಿ ಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಇಂದು ಪೋಷಣ ಅಭಿಯಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಶಿವಮೊಗ್ಗ–ಬಳ್ಳಾರಿಯ ಕೇಂದ್ರ ಸಂವಹನ ಇಲಾಖೆ, ಹೂವಿನಹಡಗಲಿಯ ಆರೋಗ್ಯ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವಿಜಯನಗರ ಇವರ ಸಂಯುಕ್ತ ಆಶ್ರಯದಲ್ಲಿ ಸೆ.24ರಂದು ಬೆಳಿಗ್ಗೆ 11 ಗಂಟೆಗೆ ಹೂವಿನಹಡಗಲಿಯ ಪಂಚಮಸಾಲಿ ಸಮುದಾಯ ಭವನದಲ್ಲಿ ಪಿ.ಎಂ. ಸೂರ್ಯ ಘರ್ ಯೋಜನೆ, ವಿಕಸಿತ ಭಾರತ ಬಜೆಟ್, ಹೊಸ ಕ್ರಿಮಿನಲ್ ಕಾನೂನುಗಳು ಹಾಗೂ ಪಿ.ಎಂ ದೂರದರ್ಶಿತ್ವ–2047ರ ಪೋಷಣ ಅಭಿಯಾನ ಮತ್ತು ಛಾಯಾಚಿತ್ರ ಪ್ರದರ್ಶನ ಹಾಗೂ ವಿಶೇಷ ಜಾಗೃತಿ ಕಾರ್ಯಕ್ರಮ, ವಿಶೇಷ ಉಪನ್ಯಾಸ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್‌ಖಾನ್ ಅವರು ಛಾಯಚಿತ್ರ ಪ್ರದರ್ಶನ ಉದ್ಘಾಟಿಸುವರು. ಶಾಸಕ ಕೃಷ್ಣ ನಾಯಕ ಅಧ್ಯಕ್ಷತೆ ವಹಿಸುವರು. ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರುವರು.

### ಭಾರತ ಸರ್ಕಾರದ ವಾರ್ತಾ ಶಾಖೆಯಿಂದ

## ಇಂದು ವಾರ್ತಾಲಾಪ ವಿಶೇಷ ಕಾರ್ಯಾಗಾರ

**ಹಂಪಿ ಟೈಮ್ಸ್ ಹೊಸಪೇಟೆ**

ಭಾರತ ಸರ್ಕಾರದ ವಾರ್ತಾ ಶಾಖೆ ಬೆಂಗಳೂರು, ಪ್ರೆಸ್ ಇನ್‌ಫಾರ್ಮೇಶನ್ ಬ್ಯುರೋ ಬೆಂಗಳೂರು, ವಿಜಯನಗರ ಜಿಲ್ಲಾಡಳಿತ, ತಾಲೂಕಾಡಳಿತ, ಜಿಲ್ಲಾ ಮತ್ತು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಪ್ರೆಸ್‌ಕ್ಲಬ್ ಹೂವಿನಹಡಗಲಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಹೂವಿನಹಡಗಲಿ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಶ್ರೀಮತಿ ರುದ್ರಾಂಭ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಸೆಪ್ಟಂಬರ್ 24ರಂದು ಮಧ್ಯಾಹ್ನ 12.30ಕ್ಕೆ ಹೂವಿನಹಡಗಲಿಯ ಶ್ರೀಮತಿ ರುದ್ರಾಂಭ ಎಂ.ಪಿ.ಪ್ರಕಾಶ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ವಿಜಯನಗರ ಮತ್ತು ಹೂವಿನಹಡಗಲಿ ಜಿಲ್ಲಾ ಮತ್ತು ತಾಲೂಕು ಮಾಧ್ಯಮ ಪ್ರತಿನಿಧಿಗಳಿಗೆ ವಿಶೇಷ ಕಾರ್ಯಗಾರ ವಾರ್ತಾಲಾಪ ಕಾರ್ಯಕ್ರಮ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಗೌರವ ಉಪಸ್ಥಿತಿವಹಿಸುವರು. ಸಂಸದ ಈ. ತುಕಾರಾಂ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಕೃಷ್ಣ ನಾಯಕ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರುಗಳಾದ ಡಾ. ಚಂದ್ರಶೇಖರ ಬಿ ಪಾಟೀಲ್, ಶಶೀಲ್ ಜಿ ನಮೋಶಿ, ವೈ.ಎಂ. ಸತೀಶ್ ಹಾಗೂ ಭಾರತ ಸರ್ಕಾರದ ವಾರ್ತಾ ಶಾಖೆ (ಪಿ.ಐ.ಬಿ) ಕೇಂದ್ರ ಸಂವಹನ ಇಲಾಖೆಯ ಕರ್ನಾಟಕ ವಲಯದ ಹೆಚ್ಚುವರಿ ಮಹಾನಿರ್ದೇಶಕರಾದ ಎಸ್.ಜಿ. ರವೀಂದ್ರ, ವಿಜಯನಗರ ಜಿಲ್ಲೆಯ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ಪಿ.ಸತ್ಯನಾರಾಯಣ, ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರು ಕೊಂಚಿಗೇರಿ, ಹೂವಿನಹಡಗಲಿ ಕರ್ನಾಟಕ ಪ್ರೆಸ್ ಕ್ಲಬ್‌ನ ಅಧ್ಯಕ್ಷ ಹೆಚ್.ಸುಭಾಸಚಂದ್ರ, ಹೂವಿನಹಡಗಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಅಧ್ಯಕ್ಷ ಪರುಶುರಾಮ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಮತ್ತು ಕಾಲೇಜಿನ ಪ್ರಾಂಶುಪಾಲ ವಿಜಯ ಕುಮಾರ್ ಹೇಮಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

**ಕಾರ್ಯಗಾರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಶ್ವೇತಾ.ಎಸ್ ಅವರು ಪೋಷಣಾ ಅಭಿಯಾನದ ಕುರಿತು, ಹಗರಿಬೊಮ್ಮನಹಳ್ಳಿ ತಾಲೂಕು ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ.ತಿಪ್ಪೇಸ್ವಾಮಿ ಅವರು ಪೋಷಣಾ ಅಭಿಯಾನ ಮತ್ತು ಮಕ್ಕಳ ಆರೈಕೆ ಕುರಿತು, ಹೂವಿನಹಡಗಲಿಯ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಲಕ್ಷ್ಮಿ ಅವರು ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಕುರಿತು, ಹೂವಿನಹಡಗಲಿ ಎಸ್‌ಬಿಐನ ವ್ಯವಸ್ಥಾಪಕರಾದ ಯಶವಂತ್‌ಕುಮಾರ್ ನಾಯ್ಕ್ ಎಲ್.ಜಿ ಅವರು ಪ್ರಧಾಮಮಂತ್ರಿ ಶ್ರಮ ಯೋಗಿ ಮಾನ್ ಧನ್ ಯೋಜನೆ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ, ಪ್ರಧಾನಮಂತ್ರಿ ಮುದ್ರಾ ಯೋಜನೆ ಮತ್ತು ಪ್ರಧಾನಮಂತ್ರಿ ಸ್ವ–ನಿಧಿಯ ಯೋಜನೆಯ ಬಗ್ಗೆ ತಿಳಿಸುವರು ಎಂದು ಭಾರತ ಸರ್ಕಾರದ ವಾರ್ತಾ ಶಾಖೆಯ ಪ್ರಕಟಣೆ ತಿಳಿಸಿದೆ.

### ನೀರಿನ ಹೊಂಡಕ್ಕೆ ಬಿದ್ದು ಬಾಲಕ ಸಾವು: ಶಾಸಕರಿಂದ ಸಾಂತ್ವನ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಗುಂಡ್ಲುವದ್ದಿಗೇರಿ ಗ್ರಾಮದ ಅಜಯ ಎಂಬ ಬಾಲಕನು ಭಾನುವಾರ ನೀರಿನ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾನೆ .

ವಿಷಯ ತಿಳಿಯುತ್ತಿದ್ದಂತೆ, ಶಾಸಕ ಹೆಚ್.ಆರ್.ಗವಿಯಪ್ಪ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಧಾವಿಸಿ, ಬಾಲಕನ ಪೋಷಕರಿಗೆ ಸಾಂತ್ವನ ಹೇಳಿದರು. ಇದೆ ವೇಳೆ ಶಾಸಕರು ಧನ ಸಹಾಯ ಮಾಡಿದರು.

ಇಂತಹ ದುರ್ಘಟನೆಗಳು ತಾಲೂಕಿನಲ್ಲಿ ಮರುಕಳಿಸದ ಹಾಗೆ ಸೂಕ್ತ ಕ್ರಮವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಶಾಸಕರು ಇದೆ ವೇಳೆ ತಿಳಿಸಿದರು. ಗ್ರಾಮಸ್ಥರು ಇದ್ದರು.

# ಸಂಗೊಳ್ಳಿ ರಾಯಣ್ಣ ಸಾಂಸ್ಕೃತಿಕ ಸಲಹಾ ಸಮಿತಿ ರಚನೆಗೆ ಪ್ರಸ್ತಾವನೆ ಸಲ್ಲಿಸಲು ಸಿಎಂ ಸೂಚನೆ



■ ಹಂಪಿ ಟೈಮ್ಸ್ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನಾಲ್ಕನೇ ಸಭೆಯ ಮುಖ್ಯಾಂಶಗಳು

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ಕಾಮಗಾರಿಗಳ ಅನುಷ್ಠಾನಕ್ಕೆ ರೂ. 179.30 ಕೋಟಿ ಟೆಂಡರ್ ಮೊತ್ತಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಸೈನಿಕ ಶಾಲೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಇನ್ನುಳಿದ ಸಿವಿಲ್ ಕಾಮಗಾರಿಗಳನ್ನು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿರುವ ರೂ. 30 ಕೋಟಿ ಕಾಮಗಾರಿ ಅನುಷ್ಠಾನ ಕುರಿತು ಕುರಿತು ಜಿಲ್ಲಾಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸೂಚಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇ.67 ಮತ್ತು ಹೊರರಾಜ್ಯದ ವಿದ್ಯಾರ್ಥಿಗಳಿಗೆ ಶೇ.33 ರಷ್ಟು ಪ್ರವೇಶಾತಿ ನಿಗದಿಪಡಿಸುವ ಕುರಿತು ಕೇಂದ್ರ ರಕ್ಷಣಾ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲು ನಿರ್ಧಾರ.

ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಒಂದನೇ ತರಗತಿಯಿಂದ ಐದನೇ ತರಗತಿವರೆಗೆ ವರ್ಟಿಕಲ್ ಶಾಲೆ ಪ್ರಾರಂಭಿಸುವ ಕುರಿತು ಪರಿಶೀಲನೆ ಮಾಡುವಂತೆ ಸೂಚಿಸಿದರು.

ಸೈನಿಕ ಶಾಲೆಯಲ್ಲಿ ಖಾಯಂ ಶಿಕ್ಷಕರ ನೇಮಕಾತಿಗೆ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಪ್ರಾಧಿಕಾರದಿಂದ ಸಂಗೊಳ್ಳಿ ರಾಯಣ್ಣ ಸ್ಮಾರಕಗಳ ಅಭಿವೃದ್ಧಿ ಕುರಿತಂತೆ, ಸೌಲಭ್ಯ ಕಲ್ಪಿಸುವ ಕುರಿತಂತೆ ನೀಲ ನಕಾಶೆ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಅವರಿಗೆ ಸೂಚನೆ ನೀಡಿದರು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಈ ಕುರಿತು ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ನಂದಗಡ ಗ್ರಾಮದಲ್ಲಿ ರೂ.75.29 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಸಂಗೊಳ್ಳಿ ರಾಯಣ್ಣ ಮ್ಯೂಸಿಯಂ ಕಾಮಗಾರಿ ಬಹುತೇಕ ಅಂತಿಮ ಹಂತದಲ್ಲಿದ್ದು, ನವೆಂಬರ್ ಎರಡನೇ ವಾರದ ಒಳಗಾಗಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಬೇಕು. ನಂದಗಢದಲ್ಲಿ ಕೆರೆ ಅಭಿವೃದ್ಧಿ ಹಾಗೂ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಸ್ಥಾಪನೆಯ ಕಾಮಗಾರಿಗಳನ್ನೂ ಇದೇ ಗಡುವಿನೊಳಗೆ ಪೂರ್ಣಗೊಳಿಸಲು ಸೂಚಿಸಿದರು.

ಸಂಗೊಳ್ಳಿ ರಾಯಣ್ಣ ಮ್ಯೂಸಿಯಂಗೆ ಕಾಂಪೌಂಡ್ ನಿರ್ಮಾಣಕ್ಕೆ ಅಗತ್ಯವಾದ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚನೆ.

ಸಂಗೊಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಶೌರ್ಯಭೂಮಿಯನ್ನು ಈಗಾಗಲೇ ಲೋಕಾರ್ಪಣೆ ಮಾಡಲಾಗಿದ್ದು, ಉತ್ತಮ ಪ್ರವಾಸಿ ತಾಣವಾಗಿ ರೂಪುಗೊಂಡಿದೆ. ಇಲ್ಲಿ ಪ್ರವಾಸಿಗರಿಗೆ ಅನುಕೂಲ ಮಾಡುವ ಉದ್ದೇಶದಿಂದ ಪ್ರವಾಸಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ 2024–25 ನೇ ಸಾಲಿನ ಕ್ರಿಯಾ ಯೋಜನೆ ರೂ. 15.48 ಕೋಟಿಗೆ ಅನುಮೋದನೆ ನೀಡಲಾಯಿತು. ಸಂಗೊಳ್ಳಿ ರಾಯಣ್ಣ ಸಾಂಸ್ಕೃತಿಕ ಸಲಹಾ ಸಮಿತಿ ರಚನೆ ಮಾಡಲು ಪ್ರಸ್ತಾವನೆ ಸಲ್ಲಿಸಲು ಸೂಚನೆ ನೀಡಲಾಯಿತು. ಸಚಿವರಾದ ಸಚಿವರಾದ ಶಿವರಾಜ ತಂಗಡಗಿ, ಭೈರತಿ ಸುರೇಶ್, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಮತ್ತಿತರರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ವಿಕಾಸ್ ಖನ್ನ ಮತ್ತು ಭಾರತೀಯ ಆಹಾರ ಸಂಸ್ಕೃತಿಯ ಹಿರಿಮೆ

ಜಗತ್ತಿನ ಪ್ರಖ್ಯಾತ ಬಾಣಸಿಗರಲ್ಲಿ ಒಬ್ಬರಾದ ಸ್ಟಾರ್ ಶೆಫ್ ವಿಕಾಸ್ ಖನ್ನ ಯಾರಿಗೆ ಗೊತ್ತಿಲ್ಲ. ರುಚಿಕರವಾದ ಖಾದ್ಯಗಳನ್ನು ಮಾಡಿ ಬಡಿಸುವುದರ ಜೊತೆ ಜೊತೆಗೆ ತನ್ನ ಸರಳತೆಗೂ ಹೆಸರಾದ ವ್ಯಕ್ತಿ ವಿಕಾಸ್ ಖನ್ನ. 2020 ರಲ್ಲಿ ಬಿಬಿಸಿ ವರ್ಲ್ಡ್ ಚಾನೆಲ್ ಗೆ ನೀಡಿದ ಸಂದರ್ಶನವೊಂದರಿಂದ ಇದೀಗ ಅವರು ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ.

ಭಾರತೀಯ ಪಾಕ ಕಲೆಯ ಸಾಂಸ್ಕೃತಿಕ ಇತಿಹಾಸವನ್ನು ಅರಿಯದ, ಸಹಭೋಜನ, ಪ್ರಸಾದ, ದಾಸೋಹಗಳ ಹೆಸರಿನಲ್ಲಿ ದೀನ ದಲಿತರಿಗೆ ಊಣ ಬಡಿಸುವ ಭಾರತ ದೇಶದ ಶ್ರೀಮಂತ ಸಂಸ್ಕೃತಿಯ ಗರಿಮೆಯನ್ನು ಅರಿಯದ ಬಿಬಿಸಿಯ ಸಂದರ್ಶಕ ವಿಕಾಸ ಖನ್ನ ಅವರಿಗೆ ಭಾರತದಲ್ಲಿ ಬಡತನ ತಾಂಡವವಾಡುತ್ತಿರುವ ಕಾರಣ ನಿಮಗೆ ಹಸಿವು ಎಂಬ ಪದದ ಅರಿವು ಉಂಟಾಯಿತಲ್ಲವೇ? ಎಂದು ಪ್ರಶ್ನೆಯೆಸಗಿದ.

ಅತ್ಯಂತ ಶಾಂತವಾದ ಮನಸ್ಥಿತಿಯೊಂದಿಗೆ ವಿಕಾಸ್ ಖನ್ನ ಉತ್ತರಿಸಿದರು "ನನಗೆ 'ಹಸಿವು' ಎಂಬ ಪದದ ಅರಿವು ಭಾರತ ದೇಶದಲ್ಲಿ ಆಗಿಯೇ ಇಲ್ಲ ಕಾರಣ ನಾನು ಹುಟ್ಟಿ ಬೆಳೆದದ್ದು ಭಾರತ ದೇಶದ ಗೋದಿಯ ಕಣಜ ಪಂಜಾಬಿನ ಅಮೃತಸರದಲ್ಲಿ. ನಮ್ಮಲ್ಲಿ ಬೃಹತ್ ಸಮುದಾಯ ಅಡುಗೆ ಕೋಣೆಗಳಿದ್ದು ಎಲ್ಲರಿಗೂ ಅಡುಗೆ ತಯಾರಾಗುವ ಅಲ್ಲಿ ಯಾರು ಬೇಕಾದರೂ ಹೊಟ್ಟೆ ತುಂಬಾ ಊಟ ಮಾಡಿ ತಮ್ಮ ಹಸಿವನ್ನು ತೀರಿಸಿಕೊಳ್ಳಬಹುದು. ಇಡೀ ಅಮೃತಸರವೆ ಉಣ್ಣಬಹುದಾದಷ್ಟು ಅಡುಗೆಯನ್ನು 'ಲಂಗರ' ಎಂಬ ಸಮುದಾಯ ಅಡುಗೆ ಕೋಣೆಗಳಲ್ಲಿ ತಯಾರಿಸಲಾಗುತ್ತದೆ. ಭಾರತವನ್ನು ಬಿಟ್ಟು ನಾನು ನ್ಯೂಯಾರ್ಕ್ಗೆ ಬಂದಾಗ ನನ್ನ ಕಷ್ಟದ ದಿನಗಳಲ್ಲಿ ನನಗೆ ಹಸಿವು ಎಂದರೇನು? ಎಂಬುದರ ನಿಜವಾದ ಅರಿವಾಯಿತು ಎಂದು ಅತ್ಯಂತ ಹೆಮ್ಮೆಯಿಂದ ಆತ ಭಾರತೀಯ ಸಂಸ್ಕೃತಿ ಮತ್ತು ತನ್ನ ದೇಶದ ಕುರಿತಾದ ಭಕ್ತಿ, ಅಭಿಮಾನವನ್ನು ತೋರಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸಾಮಾಜಿಕಜಾಲತಾಣದಲ್ಲಿ ಈ ವಿಷಯದ ಕುರಿತು ಪೋಸ್ಟ್ ಮಾಡಿದ ವಿಕಾಸ್ ಖನ್ನ ಅವರು ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಏರಿಳಿತಗಳು ಇದ್ದೇ ಇರುತ್ತವೆ, ಅಂತೆಯೇ ಭಾರತವು ಕೂಡ ಬಿ ಬಿ ಸಿ ಯ ಸಂದರ್ಶಕ ಕೇಳಿದ ಅಪ್ರಬುದ್ಧ ಪ್ರಶ್ನೆಯನ್ನು ಖಂಡಿಸಿ ಬರೆದರು.

ಭಾರತವು ವೈವಿಧ್ಯತೆಯಿಂದ ಕೂಡಿದ ಬಹು ಸಂಸ್ಕೃತಿಯ ನಾಡು.ಭಾರತ ದೇಶ ತನ್ನ ಪೂರ್ವಜರು ಹಾಕಿಕೊಟ್ಟ ಸಂಸ್ಕೃತಿ ಸಂಪ್ರದಾಯಗಳನ್ನು ಪಾಲಿಸುತ್ತಾ ಬಂದಿದೆ. ಅಲ್ಲದೆ



ಅಭಿವೃದ್ಧಿಯನ್ನು ಹೊಂದುತ್ತಿರುವ ರಾಷ್ಟ್ರಗಳಲ್ಲಿ ಭಾರತವೂ ಒಂದು. ನಮ್ಮ ಆಹಾರ ಪದ್ಧತಿಯು ನಮ್ಮ ಅತಿ ದೊಡ್ಡ ಶಕ್ತಿಯಾಗಿದ್ದು ನಮ್ಮ ಸಾಹಿತ್ಯ,ಸಂಗೀತ ನೃತ್ಯ ಕಲೆ ವಿಜ್ಞಾನ ಸಂಶೋಧನೆ ಮತ್ತು ತಂತ್ರಜ್ಞಾನಗಳು ಇಡೀ ಜಗತ್ತಿಗೆ ಅದ್ವಿತೀಯ ಕಾಣಿಕೆಯನ್ನು ನೀಡಿವೆ. ಭೂಗೋಳದಿಂದ ಖಗೋಳದವರೆಗೆ ಎಲ್ಲ ಶಾಸ್ತ್ರಗಳಲ್ಲಿ, ಖಡ್ಗ, ಕತ್ತಿ ಕಠಾರಿಯಿಂದ ಇದೀಗ ಅತ್ಯಾಧುನಿಕ ಯುದ್ಧ ವಿಮಾನಗಳವರೆಗೆ, ವಾಗ್ಭಟ, ಚರಕ, ಸುಶ್ರುತ ವರಾಹಮಿಹಿರರಿಂದ ಹಿಡಿದು ಇಂದಿನ ಆಧುನಿಕ ವೈದ್ಯಕೀಯ ತಂತ್ರಜ್ಞಾನದವರೆಗೆ ಭಾರತ ಆವರಿಸಿಕೊಂಡಿದೆ.

ಇಡೀ ಜಗತ್ತು ಆಗ ತಾನೇ ನಾಗರಿಕತೆಯ ಹೊಸ್ತಿಲಲ್ಲಿ ಇರುವಾಗ ಭಾರತ ದೇಶವು ಆಧುನಿಕ ವಿಜ್ಞಾನ ತಂತ್ರಜ್ಞಾನಗಳ ಜೊತೆ ಜೊತೆಗೆ ಖಗೋಳದ ಅಧ್ಯಯನವನ್ನು ಕೂಡ ಮಾಡಿದ್ದು 5,000 ವರ್ಷಗಳ ಹಿಂದೆಯೇ ಭೂಮಿ ಮತ್ತು ಸೂರ್ಯನ ನಡುವೆ ಇರುವ ದೂರವನ್ನು ಲೆಕ್ಕ ಹಾಕಿದ, ಯಾವುದೇ ಆಧುನಿಕ ವೈದ್ಯಕೀಯ ತಂತ್ರಜ್ಞಾನಗಳು ಇಲ್ಲದ ಕಾಲದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿದ ನಾಡು ನಮ್ಮದು.

ಆರ್ಥಿಕ ಬಡತನ ನಮ್ಮಲ್ಲಿದ್ದರೂ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಹಿರಿಮೆಯನ್ನು ಹೊಂದಿದ ಹಸಿದವರಿಗೆ ಉಣ್ಣಲು ಕೊಡುವ ಭಾರತ ದೇಶದಲ್ಲಿ ಕರೋನ ಸಂಕಷ್ಟದ ಸಮಯದಲ್ಲಿ ಉಳ್ಳವರು ಆಹಾರದ ಪೊಟ್ಟಣಗಳನ್ನು ಹಂಚಿದರೆ, ಬಡವರು ಮತ್ತು ಮಧ್ಯಮ ವರ್ಗದವರು ತಮ್ಮ ಜೀವಮಾನದ ದುಡಿಮೆಯಾದ ನಿವೇಶನಗಳನ್ನು, ಆಸ್ತಿಯನ್ನು ಮಾರಿ ದಾಸೋಹ ಸೇವೆಯನ್ನು ಎಸಗಿದರು. ಸಮಾನ ಮನಸ್ಕರು ಸೇರಿ ಅಲ್ಲಲ್ಲಿ ಅಡುಗೆ ಮಾಡಿ ಆಹಾರ ಪೊಟ್ಟಣಗಳನ್ನು ಬಡವರ, ನಿರ್ಗತಿಕರ, ಹಸಿದವರ ಮನೆಗಳಿಗೆ ತಲುಪಿಸಿದರು.

ಇಂದಿಗೂ ಭಾರತ ದೇಶದ ಮಠ ಮಾನ್ಯಗಳಲ್ಲಿ ನಿರಂತರ ದಾಸೋಹ ವ್ಯವಸ್ಥೆ ಇದೆ. ಮತ್ತೆ ಕೆಲ ಲಾಭಬಡುಕರು ವೈದ್ಯಕೀಯ ಚಿಕಿತ್ಸೆಯ ಹೆಸರಿನಲ್ಲಿ ದುಡ್ಡು ಮಾಡಿಕೊಂಡರು ಬಿಡಿ.... ನೀರಿರುವಲ್ಲಿ ಕೆಸರು ಕೂಡ ಇರುವಂತೆ ಅಂಥವರು ಕೂಡ ಇರುತ್ತಾರೆ.

ಭಾರತೀಯ ಪದ್ಧತಿಯಲ್ಲಿ ವ್ಯಕ್ತಿಯು ತಾನು ದುಡಿವ ಹಣದಲ್ಲಿ ಒಂದು ಭಾಗ ತನ್ನ ಕುಟುಂಬದ ನಿರ್ವಹಣೆಗೆ, ಮತ್ತೊಂದು ಭಾಗ ಮಕ್ಕಳ ಶಿಕ್ಷಣ ಮತ್ತು ಇತರ ಖರ್ಚು ವೆಚ್ಚಗಳಿಗೆ, ಮೂರನೆಯ ಒಂದು ಭಾಗ ಆರೋಗ್ಯ ಮತ್ತಿತರ ತೊಂದರೆಗಳನ್ನು ನಿಭಾಯಿಸಲು ಭವಿಷ್ಯಕ್ಕಾಗಿ ಎತ್ತಿಡಲು ಮತ್ತು ನಾಲ್ಕನೇ ಒಂದು ಭಾಗ ದೀನ ದಲಿತರ ದರಿದ್ರರ ದಾಸೋಹಕ್ಕಾಗಿ ನೀಡಬೇಕೆಂಬ ಅಲಿಖಿತ ನಿಯಮವಿದ್ದು ಬಹಳಷ್ಟು ಜನ ಇಂದಿಗೂ ಅದನ್ನು ಪಾಲಿಸುತ್ತಾರೆ.

ಎಲ್ಲಾ ದಿನಗಳಲ್ಲೂ ಈ ರೀತಿಯ ಸೇವೆ ಸಾಧ್ಯವಿಲ್ಲದವರು ಹಬ್ಬ ಹರಿದಿನಗಳಲ್ಲಿ ಇತರರಿಗೆ ಊಣ ಬಡಿಸಿ ತಾವು ಉಣ್ಣುತ್ತಾರೆ.. ಇಂದಿಗೂ ಮಠಮಾನ್ಯಗಳ ದಾಸೋಹ ಸೇವೆ ನಡೆಯುವುದು ಸಾರ್ವಜನಿಕರು ನೀಡುವ ದವಸ, ಧಾನ್ಯ ಮತ್ತು ದೇಣಿಗೆಗಳಿಂದ. ಸರ್ಕಾರವು ಕೂಡ ಇಂತಹ ದೇಣಿಗೆಗಳಿಗೆ ಆದಾಯ ತೆರಿಗೆಯಲ್ಲಿ ರಿಯಾಯಿತಿ ನೀಡಿ ಜನರನ್ನು ಪ್ರೋತ್ಸಾಹಿಸುತ್ತದೆ. ಹಲವಾರು ಧರ್ಮ ಜಾತಿ ಮತಗಳಿದ್ದರೂ ಕೂಡ ಭಾರತ ದೇಶದಲ್ಲಿ ಕೂಡಿ ಉಣ್ಣುವ ಅನ್ನ ಸಂಸ್ಕೃತಿ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ.

ಸಮಾಜವಾದವನ್ನು ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡ ಶ್ರಮ ಸಂಸ್ಕೃತಿಗೆ 'ಕಾಯಕ' ಎಂಬ ಗೌರವನಾಮವನ್ನು ಇಟ್ಟು ದುಡಿದು ಉಣ್ಣಲು ಹೇಳಿದ, ನುಡಿದಂತೆ ನಡೆದ ವಿಶ್ವಗುರು ಬಸವಣ್ಣನವರ ನಾಡಿನಲ್ಲಿ ನಾವು ಜನಿಸಿದ್ದೇವೆ ಎಂಬ ಹೆಮ್ಮೆ, ಅವರು ಕಲಿಸಿದಕಾಯಕ,ದಾಸೋಹಸಂಸ್ಕೃತಿಯನ್ನುಮುಂದುವರೆಸಿಕೊಂಡು ಹೋಗುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ.

# ಮಳೆ ತರುವ ದೇವರು ಜೋಕುಮಾರಸ್ವಾಮಿ

ಉತ್ತರಕರ್ನಾಟಕದ ಭಾಗದಲ್ಲಿ ಗಣೇಶ ಚತುರ್ಥಿಯೊಂದಿಗೆ ಹಲವು ಆಚರಣೆಗಳು ಗರಿಗೆದರುತ್ತವೆ. ಅಂತಹ ಆಚರಣೆಗಳಲ್ಲಿ ಒಂದು ಜೋಕುಮಾರಸ್ವಾಮಿಯ ಪೂಜೆ. ಗಣೇಶ ಹೋದ ನಂತರ ಹುಟ್ಟುವ ಜೋಕುಮಾರಸ್ವಾಮಿ ಮಳೆ ತರುವುದರ ಜೊತೆಗೆ ಕೆಟ್ಟದ್ದನ್ನು ಹೋಗಲಾಡಿಸಿ ಸುಖ ಸಮೃದ್ಧಿಯನ್ನು ನೀಡುತ್ತಾನೆ ಎಂದೇ ಜನಪದರ ನಂಬಿಕೆ. ಜೋಕುಮಾರ ಎಂದರೆ ಶಿವನ ಪುತ್ರ ಕುಮಾರಸ್ವಾಮಿ. ನಾಡ ಜನಪದರು ತಮ್ಮ ಪ್ರೀತಿಯ ದೈವವಾದ್ದರಿಂದ ಆತನನ್ನು ಮುದ್ದಿನ ಕುಮಾರಸ್ವಾಮಿ ಎಂದು ಬಣ್ಣಿಸಲಾಗುತ್ತದೆ. 'ಜೋಕುಮಾರ' ಎಂದು ಕರೆಯಲಾಗುತ್ತದೆ. ಪಾರ್ವತಿ ಪುತ್ರ ಗಣಪತಿಯು ಭೂಲೋಕಕ್ಕೆ ಬಂದು ಹೋದ ಬಳಿಕ ಕೈಲಾಸದಿಂದ ಧರೆಗೆ ಬರುತ್ತಾನೆ ಶಿವಪುತ್ರ ಕುಮಾರಸ್ವಾಮಿ ಅಥವಾ ಷಣ್ಮುಖ. ಲೋಕಪ್ರಭುವಾದ ಪರಮೇಶ್ವರ ಶಿವನ ಮೊದಲ ಮಗ ಗಣಪತಿಯು ಪ್ರಭುತ್ವದ ಪ್ರತೀಕವಾದರೆ ಕಿರಿಯ ಮಗ ಕುಮಾರಸ್ವಾಮಿಯು ತನ್ನ ಲೋಕಾನುಗ್ರಹ ಬುದ್ಧಿಯಿಂದ ಜನಪದರ ದೈವನಾದನು.

ಈ ಹಬ್ಬದ ಅಂಗವಾಗಿ ಗಂಗಾಮತಸ್ಥ ಸಮಾಜದ ಜನರು ಏಳು ದಿನಗಳ ಕಾಲ ಜೋಕುಮಾರನನ್ನು ಬುಟ್ಟಿಯಲ್ಲಿ ಹಾಕಿಕೊಂಡು ಮನೆ–ಮನೆಗೆ ತೆರಳಿ,

"ಅಡ್ಡಡ್ಡ ಮಳೆ ಬಂದ...
ದೊಡ್ಡದೊಡ್ಡ ಕೆರೆ ತುಂಬಿ,
ಗೊಡ್ಡಗಳೆಲ್ಲ ಹೈನಾಗಿ ಜೋಕುಮಾರ...

ಎಂದು ತಮ್ಮಗಾನ ಕಂಠದಿಂದ ಸುಶ್ರಾವ್ಯವಾಗಿ ಹಾಡುತ್ತಾ ಜೋಕುಮಾರರನ್ನು ಆರಾಧಿಸುವ ಹಬ್ಬ ಹಳ್ಳಿಗಳಲ್ಲಿ ಇದೆ, ಪಟ್ಟಣದಲ್ಲಿ ಇದೆ ಆದರೆ ಕಡಿಮೆ ಇದೆ ಮನೆ ಮನೆಗೆ ತೆರೆಳುವುದು ಈಗ ಕಡಿಮೆ ಆಗಿದೆ.



ಡಾ.ಸುಮಲತ ಬಿ.ಎಂ.
ಲೇಖಕರು, ಹೊಸಪೇಟೆ

Scan For Digital Colourful
HAMPI TIMES E-paper

ಭಾದ್ರಪದ ಮಾಸದ ಅಷ್ಟಮಿಯ ದಿನದಂದು ಜೋಕುಮಾರ ಹುಟ್ಟುತ್ತಾನೆ. ಮಣ್ಣಿನಿಂದ ತಯಾರಿಸಲಾದ ಜೋಕುಮಾರ ಮೂರ್ತಿಗೆ ಬೇವಿನ ಎಸಳುಗಳ ಉಡುಗೆಯೊಂದಿಗೆ ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಲಾಗುತ್ತದೆ. ಅಲಂಕೃತ ಮೂರ್ತಿಯನ್ನು ಮಹಿಳೆಯರು ಬುಟ್ಟಿಯಲ್ಲಿಟ್ಟುಕೊಂಡು ಆತನಿಗೆ ಸಂಬಂಧಿಸಿದ ಕತೆ ಹಾಡುಗಳನ್ನು ಹಾಡುತ್ತ ಸಂಚರಿಸುತ್ತಾರೆ.

7 ದಿನಗಳ ಕಾಲ ಸಂಭ್ರಮದಿಂದ ಆಚರಿಸುವ



ಜೋಕುಮಾರನನ್ನು, ಗ್ರಾಮ ಗಳಲ್ಲಿ ಕಾಲ್ನಡಿಗೆಯಲ್ಲಿಯೆ ಸಂಚರಿಸಬೇಕೆಂದು ಆರಾಧಕರು ಹಾಕಿಕೊಂಡಿರುವ ಸಂಪ್ರದಾಯ. ಮನೆಮನೆಗೆ ತೆರೆಳಿದಾಗ ಭಕ್ತರು ನೀಡುವ ಜೋಳಕ್ಕೆ ಪ್ರತಿಯಾಗಿ ಜೋಕುಮಾರನ ಅರ್ಚಕರು ಕರಿಮಸಿ ಬೆರೆತ ಬೇವಿನ ಸೊಪ್ಪು, ಜೋಳ ಇತ್ಯಾದಿಗಳನ್ನು ಪ್ರತಿಯಾಗಿಕೊಡುತ್ತಾರೆ. ಇದನ್ನು ಮಾರನೇ ದಿನ ಬೆಳಗಿನ ಜಾವ ಜೋಳದ ಪೈರಿಗೆ ಮಜ್ಜಿಗೆಯಲ್ಲಿ ಬೆರೆಸಿಕೊಂಡು ಚರಗ ಚೆಲ್ಲುತ್ತಾರೆ. ಹೀಗೆ ಮಾಡುವುದರಿಂದ ಬೆಳೆ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆ.

ಜೋಕುಮಾರಸ್ವಾಮಿ ಜನಪದೀಯ ಸಂಸ್ಕೃತಿಯ ವಿಶಿಷ್ಟ ಆಚರಣೆಯ ಹಬ್ಬ ಜೋಕುಮಾರನನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿದರೆ, ಮಳೆ–ಬೆಳೆ ಸಮೃದ್ಧಿಯಾಗಿ ಆಗುತ್ತದೆ ಎಂಬ ನಂಬಿಕೆ ಕೃಷಿಕ ಜನರಲ್ಲಿ ಹಾಸುಹೊಕ್ಕಾಗಿದೆ.

ಗಣೇಶ ಶಿಷ್ಟ ಸಂಸ್ಕೃತಿಯ ವಾರಸುದಾರನಾದರೆ, ಜೋಕುಮಾರಸ್ವಾಮಿ ಜಾನಪದ ಸಂಸ್ಕೃತಿಯ ಪ್ರತೀಕ ಒಂದು ವಾರಗಳ ಕಾಲ ಕಾಯಿ–ಕಡುಬಿನ ಭರ್ಜರಿ ಭಾರಿಬೋಜನ ಸವಿದಗಣೇಶ, ಭೂಲೋಕದಲ್ಲಿ ಎಲ್ಲವೂ ಸೌಖ್ಯವಾಗಿದೆಎಂದುತನ್ನ ತಂದೆ–ತಾಯಿ; ಶಿವ–ಪಾರ್ವತಿಗೆ ವರದಿ ಒಪ್ಪಿಸಿದರೆ, ಜಾನಪದ ಸಂಸ್ಕೃತಿಯ ವಾರಸುದಾರನಾದ ಜೋಕುಮಾರ ಸ್ವಾಮಿ 'ಭೂಲೋಕದಲ್ಲಿ ಮಳೆ ಇಲ್ಲದೆ, ನರಮನುಷ್ಯ ಸಂಕಷ್ಟದಲ್ಲಿದ್ದಾನೆ. ಹನಿ ನೀರಿಗಾಗಿ ಪ್ರಾಣಿ–ಪಕ್ಷಿಗಳು ಪರಿತಪಿಸುತ್ತಿವೆ. ಮಳೆ ಸುರಿಯದೇ ಹೋದರೆ ಭೂಲೋಕ ನರಕಕೂಪವಾಗುತ್ತದೆ ಎಂದು ಜನರ ಕಷ್ಟಕಾರ್ಪಣ್ಯಗಳ ವರದಿ ಒಪ್ಪಿಸಿ ಮಳೆಗಾಗಿ ವಿನಂತಿಸುತ್ತಾನೆ ಎಂಬುದು ಜಾನಪದ ವಿದ್ವಾಂಸರ ಅಭಿಪ್ರಾಯವಾಗಿದೆ.

ಅಲ್ಪಾಯುಷಿಯಾದ ಜೋಕುಮಾರನನ್ನು ಅನಂತನ ಹುಣ್ಣಿಮೆಯ ದಿನ ರಾತ್ರಿ ಊರಿನ ಹರಿಜನಕೇರಿಯಲ್ಲಿಟ್ಟು ಈತನ ಸುತ್ತಲೂ ಮುಳ್ಳು ಹಾಕಿ ಹೆಣ್ಣುಮಕ್ಕಳು ಸುತ್ತುತ್ತಾ ಹಾಡುತ್ತಾರೆ. ಹೆಣ್ಣು ಮಕ್ಕಳ ಸೆರಗು ಮುಳ್ಳಿಗೆ ತಾಗುತ್ತದೆ. ಜೋಕುಮಾರನೇ ಸೀರೆ ಎಳೆದನೆಂದು ಭಾವಿಸಿ ಗಂಡಸರು ಆತನನ್ನು ಒನಕೆಯಿಂದ ಬಡಿದುಸಾಯಿಸುತ್ತಾರೆ. ಆಗ ಆತನರುಂಡ ಅಂಗಾತ ಬಿದ್ದರೆ ಸುಖಕಾಲವೆಂದು, ಬೋರಲು ಬಿದ್ದರೆ ದುಃಖ ಕಾಲವೆಂದು ಗ್ರಾಮೀಣರು ನಂಬುತ್ತಾರೆ. ಸತ್ತ ನಂತರ ರುಂಡ–ಮುಂಡಗಳನ್ನು ಅಗಸರು ಊರಿನ ಬದಿಯ ಹಳ್ಳಕ್ಕೆ ಒಯ್ದು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಹಾಕಿ ಬರುತ್ತಾರೆ. ಆಗ ಜೋಕುಮಾರನು ನರಳುತ್ತಾರೆ. ಸತ್ತ ನಂತರ ರುಂಡ–ಮುಂಡಗಳನ್ನು ಅಗಸರು ಊರಿನ ಬದಿಯ ಹಳ್ಳಕ್ಕೆ ಒಯ್ದು ಬಟ್ಟೆ ಒಗೆಯುವಕಲ್ಲಿನ ಕೆಳಗೆ ಹಾಕಿಬರುತ್ತಾರೆ. ಆಗ ಜೋಕುಮಾರನು ನರಳುತ್ತಾನೆ. ಇದರಿಂದ ತಮಗೆ ಅಪಾಯವಾಗುವುದು ಎಂದು ನಂಬುತ್ತಾರೆ. ಅಗಸರು ಮೂರು ದಿನಗಳ ಕಾಲ ಬಟ್ಟೆ ಒಗೆಯಲು ಹಳ್ಳಕ್ಕೆ ಹೋಗುವುದಿಲ್ಲ. ನಾಲ್ಕನೇ ದಿನ ಆತನನ್ನು ಸಂತೈಸಲು ಕರ್ಮಾದಿ ಕಾಯಕ ಮಾಡುತ್ತಾರೆ ಎಂಬ ಕಥೆ ಜನರಲ್ಲಿದೆ.

ಜೋಕುಮಾರನನ್ನು ಜನಪದರು ತಮ್ಮ ಹಾಡುಗಳಲ್ಲಿ ಹೀಗೆ ಹೇಳುತ್ತಾರೆ.

ರೈತರ ದೇವತೆ ಎನ್ನುವಲ್ಲಿ ಹಾಡುವ ಹಾಡು ಹೀಗಿದೆ:

"ಹಾಸ್ಯಾಸಿ ಮಳಿ ಬಡಿದು ಬೀಸಿ ಬೀಸಿ ಕೆರೆತುಂಬಿ,
ಬಾಸಿಂಗದಂತೆ ತೆನೆಬಾಗಿ ಗೌಡರ ರಾಶಿಯ ಮ್ಯಾಲೆ,
ಸಿರಿ ಬಂದು ಜೋಕುಮಾರ..."

"ಗೊಡ್ಡುಗಳೆಲ್ಲ ಹೈನಾಗಿ ಜೋಕುಮಾರ್ ಗುಡ್ಡಗಳೆಲ್ಲ
ಹಸಿರಾಗಿ ಜೋಕುಮಾರ, ಹಾಸ್ಯಾಸಿ ಮಳಿ ಬಡಿದು,
ಬೀಸಿ ಬೀಸಿ ಕೆರೆತುಂಬಿ ಬಾಸಿಂಗದಂತೆ ತೆನೆಬಾಗಿ
ಜೋಕುಮಾರ."

ಜೋಕುಮಾರನ ಸುತ್ತಲೂ ಅನೇಕ ಕಥೆಗಳಿವೆ. ಭೂಲೋಕಕ್ಕೆ ಈತನು ಬಂದು ಹೋದ ನಂತರ ಅದು ಸುಖದ ಕಾಲವೆಂದು ಜನಪದರು ನಂಬುತ್ತಾರೆ.

"ಜೋಕುಮಾರ ಹುಟ್ಟಲಿ, ಲೋಕವೆಲ್ಲ ಬೆಳಗಲಿ, ಆ
ತಾಯಿ ಹಾಲು ಕರೆಯಲಿ, ಕಟ್ಟಿದ ಮೊಸರು ಕಟಿಯಲಿ
ನಮ್ಮದೇವಿ..." ಎಂದು ಹೀಗೆ ಸಾಮೂಹಿಕವಾಗಿ
ಮಹಿಳೆಯರು ಜೋಕುಮಾರನ ಕುರಿತು ಜನಪದ
ಶೈಲಿಯಲ್ಲಿ ಸೊಗಸಾಗಿ ಹಾಡುವ ಹಾಡುಗಳನ್ನು
ಕೇಳುವುದೇ ಚಂದ ಮನಕ್ಕೆ ಆನಂದ.

ಇಂದಿಗೂ ಹಳ್ಳಿಗಳಲ್ಲಿ ಮೆರೆಯುವವರನ್ನು 'ದೊಡ್ಡಜೋಕುಮಾರ ಆಗ್ಯಾನ' ಎಂದು ಹೇಳುವದನ್ನು ನೋಡಿದರೆ ಇದು ಕಾಮುಕ, ಗರ್ವಿಷ್ಟ್ಯ, ಸೊಕ್ಕಿನವನೆಂದು ಅರ್ಥ ನೀಡುತ್ತದೆ. ಜೋಕ ಎಂದರೆ ಡೌಲು, ಬೆಡಗು, ಮನ್ಮಥ, ಠೀವಿ ಉಳ್ಳವನೆಂಬ ಅರ್ಥಗಳಿವೆ. ನೊಂದವರ, ಬಡವರ ಪ್ರತೀಕವಾದ ಜೋಕುಮಾರನ ಬಗ್ಗೆ ಬಹಳಷ್ಟು ನಂಬಿಕೆ ಸಂಪ್ರದಾಯಗಳು ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿವೆ. ಪ್ರತಿವರ್ಷ ಜೋಕುಮಾರನನ್ನು ಹೊತ್ತು ತಂದು ಮನೆ ಮನೆಗಳಿಗೆ ತೆರಳಿ ಸೌಹಾರ್ದತೆಯಿಂದ ಆಚರಿಸಲಾಗುತ್ತದೆ.

## ಕವಿ ಮನಸು

### ಮಗಳು

ಮಗಳು ಮನೆ ಬೆಳಕು
ತೊಳೆವಳು ಮನದ ಕೊಳಕು
ಹೆಣ್ಣೆಂದು ಜರಿಯ ಬೇಡಿ
ಅವಳಿಗು ಪ್ರೀತಿ ನೀಡಿ
ಮಗಳೆಂಬ ದೇವತೆ
ಇರಲು ನಮ್ಮ ಜೊತೆ
ಸುಖಕ್ಕಿಲ್ಲ ಯಾವುದೇ ಕೊರತೆ.

– ಸುವರ್ಣಾ ಭಟ್ಟ.

### ಭ್ರಮಾ ಲೋಕ

ಎಲ್ಲರೂ ಇರುವುದು ಭ್ರಮಾ ಲೋಕ
ಮಾಡುತಿಹರು ಅದರಲಿ ಕಾಯಕ
ಬೇಕು ಬೇಡಿಕೆಗಳು ಬೇಕು ಬಾಳಿಗೆ
ಉಳಿಸುತಿಹರು ಅದರಲಿ ನಾಳೆಗೆ।

ವೇದ ಸಿದ್ಧಾಂತ ಹೇಳುವರು
ಅದರಲಿ ತಾವೆ ಬದುಕರು
ಹೇಳುವ ಸಿದ್ಧಾಂತ ನೂರಾರು
ಒಂದನ್ನು ಸಹ ತಾವು ಮಾಡರು।

ದಾನ ಧರ್ಮ ಮಾಡುತಿಹರು
ಅದರಲಿ ಆಡಂಬರ ತೋರುವರು
ಕೊಟ್ಟದ್ದು ತನಗೆ ಎನ್ನುವರು
ನೂರಾರು ಜನಕೆ ಹೇಳುವರು।

ನಿತ್ಯವೂ ಹಣಕೆ ಹೊಂಚು ಹಾಕುವರು
ತಾ ಮಾಡಿದ್ದು ಪರರಿಗೆ ತಿಳಿಯಗೊಡರು
ಬಂಧು ಬಳಗ ಯಾರನ್ನು ಇವರು
ನೋಡರು
ಪ್ರೀತಿ ವಿಶ್ವಾಸ ಜನರಲಿ ತೋರಿಸುತಿಹರು।

ಜನ ಸೇವಕರೆಂದು ಕೈ ಮುಗಿಯುವರು
ಓಟು ಪಡೆಯಲು ಕೈ ಮುಂದೆ
ಮಾಡುವರು
ಊರ ಅಭಿವೃದ್ಧಿ ನಾ ಮಾಡುವೆ
ಎನ್ನುವರು
ಊರಿಗೆ ಎಂದೂ ಮತ್ತೇ ತಿರುಗಿ
ನೋಡರು।

ಇಂಥಹ ಜನರಲಿ ಬಾಳು ಕೆಲವರದು
ಜೀರೋ ಬಲ್ಬಿನಂತೆ ಇವರ ಬದುಕು
ಬೆಳಕು ಇದ್ದ ಕಡೆಗೆ ಜನರು ದಂಡೆ ದಂಡು
ಯಾರ ಮುಖಕ್ಕೆ ಸಿಡಿಯುವುದೋ ಇವರು
ಗುಂಡು॥

– ಚಂದ್ರಶೇಖರಯ್ಯ ರೋಣದಮಠ.

### ಶಾಂತ–ಪ್ರಶಾಂತ

ಹುಡುಕಲು ಹೊರಟರೆ ಸಿಗುವುದಿಲ್ಲ ಶಾಂತಿ
ನಮ್ಮೊಳಗೆ ಇರುವುದು ನೆಮ್ಮದಿಯ ಕಾಂತಿ
ಶುರುವಾಗಿದೆ ಮನಸ್ಸಿಗೂ ಬುದ್ದಿಗೂ
ನಡುವೆ ಯುದ್ಧ
ನಾನಡೆವೆ ಹೃದಯದ ಮಾತಿಗೆ ಬದ್ಧ

ಮನದಲ್ಲಿ ಮೂಡಿದೆ ಆಸೆಗಳ ಸಾಗರ
ಕಾಣುತಿದೆ ಕನಸಿನ ಆಗರ
ಸಾಕೆನಿಸುತಿದೆ ಭಾವನೆಗಳ ಅಬ್ಬರ
ನಿಯಂತ್ರಿಸಲಾಗದು ಮನಸ್ಸಿನ ಭಾರ

ಸ್ಮರಿಸೋಣ ಭಗವಂತನ ನಾಮ
ಕಷ್ಟ ಕಾರ್ಪಣ್ಯಗಳ ಪರಿಹರಿಸುವನು ರಾಮ
ಬದುಕಾಗುವುದು ಸುಂದರ ಧಾಮ

ಮನಸ್ಸಿನ ಚಂಚಲತೆ ಆದರೆ ಶಾಂತ
ಕಾಣುವುದು ಜಗತ್ತೇ ಪ್ರಶಾಂತ

– ಚೇತನ ಭಾರ್ಗವ, ಬೆಂಗಳೂರು

### ಹೊಸ ಮನ್ವಂತರ

ಇರುಳ ಕತ್ತಲೆಗೆ ಲೇಖನಿ ಬರೆದರೆ
ಧರಣಿಗೂ ಬಂತು ಬೆಳಗು ಜಾವ
ದುಡಿಯುವ ನೇಗಿಲು ಬಾಗಿಲು ತೆರೆದರೆ
ಮರತೆ ಹೋಯಿತು ಎದೆಯ ನೋವ.

ಕಾರ್ಮೋಡದ ಮಳೆಯು ಮಣ್ಣಿಗೆ
ಸುರಿದರೆ
ಜೀವ ಜೀವಕ್ಕೆ ವಸಂತ ಭಾವ
ಅನ್ನವ ನೀಡುವ ಮಣ್ಣಿನ ತಾಯಿಗೆ
ಕಣ್ಣಲ್ಲಿ ತುಂಬಿತು ಮಕ್ಕಳ ಜೀವ

ಸುತ್ತಲೂ ಕವಿದ ಕತ್ತಲೆಯೊಳಗೆ
ತಬ್ಬಲಿಗೂ ಬಂತು ಹಣತೆಯ ತ್ಯಾವ
ಮೆಟ್ಟಿಲು ಹತ್ತುವ ಬೆಟ್ಟದ ಎತ್ತರ
ಬದುಕೇ ನೀಡಿತು ತಾರುಣ್ಯಕ್ಕೆ ಉತ್ತರ.

ಬೆಳಕನು ಬಯಸಿ ಗಲ್ಲಿಯ ಗುಡಿಸಲು
ಕೆಸರೋಳ್ ಅರಳಿದ ತಾವರೆಯಂತೆ
ದಾರಿದ್ರ್ಯ ತೊರೆದು ಭವಿಷ್ಯವ ಕಾಣಲು
ಲೇಖನಿ ತಂದಿತು ಹೊಸ ಮನ್ವಂತರ.

– ಜಿ.ಎರಿಸ್ವಾಮಿ ಸಂಕ್ಲಾಪುರ

# ಬಾಸ್ಕೆಟ್ ಬಾಲ್ ಆಟದ ಸಾಧಕ ಎಸ್.ಪಿ.ಯಾದವ್



ಸತ್ ಪ್ರಕಾಶ್ ಯಾದವ್ ಹರಿಯಾಣದ ಹಿಸಾರ 02 ಏಪ್ರಿಲ್ 1955 ರಂದು ಜನಿಸಿದ ಇವರು ಭಾರತದ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ತಂಡದ ಮಾಜಿ ಮುಖ್ಯ ತರಬೇತುದಾರರು ಮತ್ತು ಈ ಹಿಂದೆ ಭಾರತೀಯ ಪುರುಷರ ತಂಡದ ನಾಯಕರಾಗಿದ್ದರು.

1981 ರಿಂದ 1990 ರವರೆಗೆ ಭಾರತೀಯ ರಾಷ್ಟ್ರೀಯ ತಂಡದಲ್ಲಿ ಮತ್ತು 1973 ರಿಂದ 1995 ರವರೆಗೆ 23 ವರ್ಷಗಳ ಕಾಲ ಹಿರಿಯ ರಾಷ್ಟ್ರೀಯ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದಾರೆ

ಇವರನ್ನು 2007 ರಲ್ಲಿ ರಾಷ್ಟ್ರೀಯ ಪುರುಷರ ತಂಡದ ತರಬೇತುದಾರರಾಗಿ ನೇಮಿಸಲಾಯಿತು.

**ಸಾಧನೆಗಳು**

1981(ಕಲ್ಕತ್ತಾ)ಏಷ್ಯನ್ ಬಾಸ್ಕೆಟ್‌ಬಾಲ್ ಕಾನ್ಫೆಡರೇಶನ್ ಚಾಂಪಿಯನ್‌ಶಿಪ್, 1982(ದೆಹಲಿ)– 9ನೇ ಏಷ್ಯನ್ ಗೇಮ್ಸ್, 1982(ದಕ್ಷಿಣ ಕೊರಿಯಾದ ಸಿಯೋಲ್) ಅಂತರರಾಷ್ಟ್ರೀಯ ಆಹ್ವಾನಿತ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್, 1983(ಹಾಂಗ್ ಕಾಂಗ್)–ಏಷ್ಯನ್ ಬಾಸ್ಕೆಟ್‌ಬಾಲ್ ಕಾನ್ಫೆಡರೇಶನ್ ಚಾಂಪಿಯನ್‌ಶಿಪ್ ಭಾರತೀಯ ತಂಡದ ಆಟಗಾರರಾಗಿ ಪ್ರತಿನಿಧಿಸಿರುತ್ತಾರೆ.

1983(ಥಾಯ್ಲೆಂಡ್‌ನ ಬ್ಯಾಂಕಾಕ್)ನಲ್ಲಿ ನಡೆದ 3ನೇ ಕ್ರೌನ್ ಪ್ರಿನ್ಸ್ ಕಪ್ ಇಂಟರ್‌ನ್ಯಾಶನಲ್ ಇನ್ವಿಟೇಷನಲ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ ಭಾರತವನ್ನು ಪ್ರತಿನಿಧಿಸಿ ಬೆಳ್ಳಿ ಪದಕವನ್ನು ಪಡೆದಿರುತ್ತಾರೆ.

1983 ರಲ್ಲಿ ಭಾರತವನ್ನು ಪ್ರತಿನಿಧಿಸಿದ ಎಂಟು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಅಥ್ಲೀಟ್ಸ್ ಇನ್ ಆಕ್ಷನ್ (ಯು,ಎಸ್,ಎ) ಬ್ಯಾಸ್ಕೆಟ್‌ಬಾಲ್ ತಂಡದ ವಿರುದ್ಧ ಮತ್ತು ಸರಣಿಯಲ್ಲಿ ವಿಜೇತರಾಗಿದ್ದಾರೆ.

ಬೆನ್ಸನ್ ಮತ್ತು ಹೆಡ್ಜಸ್ ಕಪ್ ಅಂತರಾಷ್ಟ್ರೀಯ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿ 1984 ರಲ್ಲಿ ಮಲೇಷ್ಯಾದ ಕೌಲಾಲಂಪುರ್ ನಲ್ಲಿ ನಡೆದ ಭಾರತೀಯ ತಂಡದ ನಾಯಕನ ಜವಾಬ್ದಾರಿ ನಿರ್ವಹಿಸಿರುತ್ತಾರೆ.

1984 ಸಿಂಗಪುರದಲ್ಲಿ ನಡೆದ ಮೆರ್ಲಿಯನ್ ಕಪ್ ಇಂಟರ್ನ್ಯಾಷನಲ್ ಇನ್ವಿಟೇಷನಲ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ 1984 ರಲ್ಲಿ ಭಾರತೀಯ ತಂಡದ ನಾಯಕರಾಗಿದ್ದರು.

1984 ರಲ್ಲಿ ಭಾರತದಲ್ಲಿ ಭೇಟಿ ನೀಡಿದ ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಯುಎಸ್‌ಎ) ಬ್ಯಾಸ್ಕೆಟ್‌ಬಾಲ್ ತಂಡದ ವಿರುದ್ಧ ಎಂಟು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭಾರತವನ್ನು ಪ್ರತಿನಿಧಿಸಿ ಸರಣಿಯನ್ನು ಗೆಲ್ಲಲು ನೆರವಾದರು.

1985 ಕೌಲಾಲಂಪುರದಲ್ಲಿ ನಡೆದ ಏಷ್ಯನ್ ಬಾಸ್ಕೆಟ್‌ಬಾಲ್ ಕಾನ್ಫೆಡರೇಶನ್ ಚಾಂಪಿಯನ್‌ಶಿಪ್ ರಲ್ಲಿ ಭಾರತವನ್ನು ಪ್ರತಿನಿಧಿಸಿದರು.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

1985 ರಲ್ಲಿ ಭೇಟಿ ನೀಡಿದ ಂ೨೨೨, ಎಸ್, ಎಸ್, ಆರ್. ಬ್ಯಾಸ್ಕೆಟ್‌ಬಾಲ್ ತಂಡದ ವಿರುದ್ಧ ಆರು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭಾರತವನ್ನು ಪ್ರತಿನಿಧಿಸಿದರು.

1986 ರಲ್ಲಿ ಭೇಟಿ ನೀಡಿದ ಯುಗೊಸ್ಲಾವಿಯನ್ ಬ್ಯಾಸ್ಕೆಟ್‌ಬಾಲ್ ತಂಡದ ವಿರುದ್ಧ ಆರು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಭಾರತವನ್ನು ಪ್ರತಿನಿಧಿಸಿದರು.

ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಬಾಸ್ಕೆಟ್‌ಬಾಲ್ ಕಾನ್ಫೆಡರೇಶನ್ ಚಾಂಪಿಯನ್‌ಶಿಪ್ 1987 ರಲ್ಲಿ ಭಾರತವನ್ನು ಪ್ರತಿನಿಧಿಸಿದರು.

1987 ರಲ್ಲಿ ಕಲ್ಕತ್ತಾದಲ್ಲಿ ನಡೆದ 3 ನೇ ಸ್ಯಾಫ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದರು ಮತ್ತು ಚಿನ್ನದ ಪದಕ ಗೆಲ್ಲಲು ನೆರವಾದರು.

ಬ್ಯಾಂಕಾಕ್‌ನಲ್ಲಿ ನಡೆದ ವಿ ಕ್ರೌನ್ ಪ್ರಿನ್ಸ್ ಕಪ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ 1987 ರಲ್ಲಿ ಭಾರತವನ್ನು ಪ್ರತಿನಿಧಿಸಿದರು.

1987 ರಲ್ಲಿ ದೆಹಲಿಯಲ್ಲಿ ನಡೆದ ವಿಶ್ವ ರೈಲ್ವೇ ಗೇಮ್ಸ್‌ನಲ್ಲಿ ಭಾರತೀಯ ರೈಲ್ವೇಸ್ ತಂಡದ ಕ್ಯಾಪ್ಟನ್ ಮತ್ತು ಕಂಚಿನ ಪದಕವನ್ನು ಗಳಿಸಿಕೊಟ್ಟರು.

1988 ಸಿರಿಯಾಕ್ಕೆ ಅಂತರಾಷ್ಟ್ರೀಯ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಪ್ರವಾಸದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

1989 ಇರಾನ್‌ನ ಮಶಾದ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

1990 ರಲ್ಲಿ ರೊಮೇನಿಯಾದಲ್ಲಿ ನಡೆದ ವಿಶ್ವ ರೈಲ್ವೇ ಗೇಮ್ಸ್‌ನಲ್ಲಿ ಭಾರತೀಯ ರೈಲ್ವೆ ತಂಡದಿಂದ ಪ್ರತಿನಿಧಿಸಿ ಕಂಚಿನ ಪದಕವನ್ನು ಗಳಿಸಿಕೊಟ್ಟರು.

**ತರಬೇತುದಾರರಾಗಿ ಸಾಧನೆಗಳು**

ಎಫ್,ಐ,ಬಿ,ಎ. ಏಷ್ಯಾ ಚಾಲೆಂಜ್ ಕಪ್ 2016 ಹಿರಿಯ ಭಾರತೀಯ ಪುರುಷ ತಂಡವು 27 ವರ್ಷಗಳ ನಂತರ ಅರ್ಹತೆ ಮತ್ತು ಏಳನೇ ಸ್ಥಾನವನ್ನು ಪಡೆದುಕೊಂಡಿತು.

28 ನೇ ಎಫ್,ಐ,ಬಿ,ಎ.ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ 2015 ರ ಹಿರಿಯ ಭಾರತೀಯ ಬಾಸ್ಕೆಟ್‌ಬಾಲ್ ಪುರುಷರ ತಂಡವು 12 ವರ್ಷಗಳ ನಂತರ ಅರ್ಹತೆ ಗಳಿಸಿ ಕ್ವಾರ್ಟರ್‌ಫೈನಲ್‌ನಲ್ಲಿ ಪ್ರದರ್ಶನ ನೀಡಿತು.

16 ನೇ ಏಷ್ಯನ್ ಗೇಮ್ಸ್ 2010 ರ ಹಿರಿಯ ಭಾರತೀಯ ಬಾಸ್ಕೆಟ್‌ಬಾಲ್ ಮಹಿಳಾತಂಡವು ಅರ್ಹತೆ ಮತ್ತು ಆರನೇ ಸ್ಥಾನವನ್ನು ಪಡೆದುಕೊಂಡಿತು.

22 ನೇ ಎಫ್,ಐ,ಬಿ,ಎ.ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ 2007 ರ ಭಾರತೀಯ ಬ್ಯಾಸ್ಕೆಟ್‌ಬಾಲ್ ಮಹಿಳಾ ತಂಡ ಆಡಿದ ಎಲ್ಲಾ ಪಂದ್ಯಗಳನ್ನು ಗೆದ್ದು ಮೊದಲ ಬಾರಿಗೆ ಹಂತ–ಋ ಗೆ ಅರ್ಹತೆ ಗಳಿಸಿತು.

**ಪ್ರಶಸ್ತಿಗಳು ಮತ್ತು ಮನ್ನಣೆ**

ಆಗಿನ ಯು,ಎಸ್.ಅಧ್ಯಕ್ಷ ರೊನಾಲ್ಡ್ ರೇಗನ್ ಅವರಿಂದ ಕ್ರೀಡಾ ರಾಯಭಾರಿ ಪ್ರಶಸ್ತಿ,1987 ರಲ್ಲಿ ರಾಜಸ್ಥಾನದ ಮಹಾರಾಣಾ ಪ್ರತಾಪ್ ಪ್ರಶಸ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡಾ ಕ್ಷೇತ್ರದಲ್ಲಿ ಸುದೀರ್ಘ ಅವಧಿಯವರೆಗೆ ಅತ್ಯುತ್ತಮ ಪ್ರದರ್ಶನಕ್ಕಾಗಿ ನೀಡಿ ಗೌರವಿಸಲಾಗಿದೆ.

ಬ್ಯಾಸ್ಕೆಟ್‌ಬಾಲ್‌ನಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನಕ್ಕಾಗಿ 1989 ರ ರೈಲ್ವೆ ಸಚಿವರ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಗಿದೆ. ಎಫ್,ಐ,ಬಿ,ಎ.ಡಬ್ಲ್ಯೂ,ಎ,ಬಿ,ಸಿ. ಪರವಾನಗಿ ಹೊಂದಿದವರಾಗಿದ್ದಾರೆ (ಪರವಾನಗಿ ಸಂಖ್ಯೆ: 2007019309). ಅರ್ಜುನನಾಗಿ ತಂಡವನ್ನು ಗೆಲುವಿನ ದಿಕ್ಕಿನಡೆಗೆ ಕೊಂಡೊಯ್ದುದಲ್ಲದೆ, ಮಾರ್ಗದರ್ಶನವನ್ನು ನೀಡಿದ ಪ್ರಕಾಶ್ ಯಾದವ್ ರವರು ನಿಜಕ್ಕೂ ಭಾರತೀಯ ಬಾಸ್ಕೆಟ್ ಬಾಲ್ ತಂಡದ ಮಾದವರೇ ಸರಿ.

# ಮಾದರಿ ಪುಸ್ತಕ ಪ್ರೇಮಿ : ಕಟಿಂಗ್ ಶಾಪಲ್ಲಿ



ತ್ರರಾವರಿ ಪುಸ್ತಕಗಳ ಗ್ರಂಥಾಲಯವಿರುವ ಕಟಿಂಗ್ ಶಾಪಿನ ಫೋಟೋವೊಂದು ವೈರಲ್ ಆಗಿ ಓಡಾಡುತ್ತಿತ್ತು. ಮೇಲುನೋಟಕ್ಕೆ ಇದೊಂದು ಫೋಟೋಶಾಪ್ ಮಾಡಿದ ಫೇಕ್ ಫೋಟೋ ಇರಬೇಕು ಅಂದುಕೊಂಡೆ. ನಂತರ ಇದನ್ನು ಪರಿಶೀಲಿಸಲು ಗೂಗಲ್ ಮಾಡಿದಾಗ, ಈ ಫೋಟೋದ ನಿಜದ ಕಥೆ ಹೇಳುವ ಹಿಂದೂ ಪತ್ರಿಕೆಯ ವರದಿಯೊಂದು ಕಾಣಿಸಿತು. ಈ ಫೋಟೋದ ಬಗೆಗಿನ ಕುತೂಹಲಕಾರಿ ಸಂಗತಿ ತಿಳಿಯಲೆಂದು ವರದಿಯನ್ನು ಅನುವಾದಿಸಿದ್ದೇನೆ.

ಪೊನ್ನ ಮರಿಯಪ್ಪ ಹದಿನೆಂಟು ವರ್ಷ ದಿನಗೂಲಿ ಮಾಡಿ ಅದರಲ್ಲಿ ಒಂದಷ್ಟು ಹಣವನ್ನು ಉಳಿತಾಯ ಮಾಡುತ್ತಾನೆ. ಈ ಹಣದಲ್ಲಿ ತನ್ನ ಬಹುದಿನದ ಕನಸಾದ ತನ್ನದೇ 'ಸುರೇಶ್ ಬ್ಯೂಟಿ ಸೆಂಟರ್' ಹೆಸರಿನ ಕಟಿಂಗ್ ಶಾಪೊಂದನ್ನು ತಮಿಳುನಾಡಿನ ತೂತುಕುಡಿ ಜಿಲ್ಲೆಯ ಮಿಲ್ಲೆರ್ ಪುರಂ ನಲ್ಲಿ 2014 ರಲ್ಲಿ ತೆರೆಯುತ್ತಾನೆ.

ಸಹಜವಾಗಿ ಕಟಿಂಗ್ ಮಾಡಿಸಲು ಬಂದವರು ತಮ್ಮ ಸರತಿ ಬರುವ ತನಕ ಕಾಯಬೇಕಾಗಿತ್ತು. ಈ ಅವಧಿಯಲ್ಲಿ ಎಲ್ಲರೂ ತಮ್ಮ ಮೊಬೈಲಿನಲ್ಲಿ ಮುಳುಗಿರುತ್ತಿದ್ದರು. ಕೆಲವರು ಶಾಪಲ್ಲಿನ ಟಿವಿ ನೋಡುತ್ತಿದ್ದರು. ಹೀಗಿರುವಾಗ ಮರಿಯಪ್ಪನಿಗೆ ಸರತಿ ಬರುವ ತನಕ ಕಾಯುವವರ ಕೈಗೆ ಪುಸ್ತಕಗಳನ್ನು ಯಾಕೆ ಕೊಡಬಾರದು ಎನ್ನುವ ಯೋಚನೆ ಹೊಳೆಯುತ್ತದೆ. ಮರುದಿನವೇ ತನ್ನ ಶಾಪಿನಿಂದ ಟಿ.ವಿಯನ್ನು ತೆಗೆಯುತ್ತಾನೆ. ಆಗ ಟಿವಿ ಇಟ್ಟಿದ್ದ ಜಾಗದಲ್ಲಿ ದಿನ ಪತ್ರಿಕೆಗಳ ಜತೆ 5 ಪುಸ್ತಕಗಳನ್ನು ಇಡುತ್ತಾರೆ. ಈ ಐದೂ ಪುಸ್ತಕಗಳು ಕಾರ್ಲ್ ಮಾರ್ಕ್ಸ್, ಅಬ್ರಾಹಂ ಲಿಂಕನ್, ಪೆರಿಯಾರ್, ಅಣ್ಣಾದೊರೈ, ಅಬ್ದುಲ್ ಕಲಾಮ್ ಕುರಿತಾದ ಆತ್ಮಕಥನ/ಜೀವನ ಚರಿತ್ರೆಗಳು. ಕೆಲವೇ ದಿನಗಳಲ್ಲಿ ಮೊಬೈಲ್ ನೋಡುವವರು ಈ ಪುಸ್ತಕಗಳನ್ನು ಹಿಡಿದು ತಿರುವಿಹಾಕಿ ಹಾಗೆ ಪುಸ್ತಕದ ಜಾಗಕ್ಕೆ ಇಡತೊಡಗಿದರು, ಕೆಲವರು ಚೂರು ಚೂರು ಓದತೊಡಗಿದರು. ಇದು ಮರಿಯಪ್ಪನ ಖುಷಿಯನ್ನು ಇಮ್ಮಡಿಗೊಳಿಸಿತು.



ಅರುಣ್ ಜೋಳದ
ಕೂಡ್ಲಿಗಿ

Scan For Digital Colourful
HAMPI TIMES E-paper

ಆ ನಂತರ ಮರಿಯಪ್ಪ ಹಳೆ ಪುಸ್ತಕ ಮಾರುವವರಲ್ಲಿ, ಹೆಚ್ಚು ರಿಯಾಯಿತಿ ದರದಲ್ಲಿ ಮಾರುವ ಪುಸ್ತಕ ಮೇಳಗಳಲ್ಲಿ ಪುಸ್ತಕಗಳನ್ನು ಕೊಂಡು ತನ್ನ ಶಾಪಿಗೆ ತರತೊಡಗುತ್ತಾನೆ. 2015 ರ ಕೊನೆಗೆ ಶಾಪಿನ ಒಂದು ಗೋಡೆಯನ್ನು ಪುಸ್ತಕಗಳ ಕಪಾಟಿಗಾಗಿ ಸಿದ್ದಗೊಳಿಸುತ್ತಾನೆ. ತತ್ವಶಾಸ್ತ್ರ, ವಿಜ್ಞಾನ, ಜನಪದ ಕತೆ, ಧರ್ಮ, ನೀತಿಕತೆಗಳು, ಮಕ್ಕಳಿಗೆ ಬೇಕಾಗುವ ರಮ್ಯ ಕಥೆಗಳು ಹೀಗೆ ಹಲವು ವೈವಿಧ್ಯಮಯ 250 ಪುಸ್ತಗಳು ಸೇರ್ಪಡೆಗೊಳ್ಳುತ್ತವೆ.

"ಶಾಪಿಗೆ ಬಂದು ಅವರ ಸರತಿ ಬರುವವರೆಗೆ ಕಾಯುವ ಗಿರಾಕಿಗಳನ್ನು ದಯವಿಟ್ಟು ಮೊಬೈಲ್ ಬಳಸಬೇಡಿ, ಇಲ್ಲಿ ಒಳ್ಳೊಳ್ಳೆ ಪುಸ್ತಕಗಳಿವೆ ಕಟಿಂಗ್ ಮಾಡಿಸಿಕೊಳ್ಳುವ ತನಕ ಪುಸ್ತಕ ಓದಿ" ಎಂದು ಆತ್ಮೀಯವಾಗಿ ಕೇಳಿಕೊಳ್ಳುವೆ. ಈ ತನಕ ಯಾರೂ ನನ್ನ ಮಾತನ್ನು ಮೀರಿಲ್ಲ. ಅದು ನನಗೆ ಖುಷಿಕೊಡುತ್ತದೆ ಎನ್ನುತ್ತಾನೆ ಮರಿಯಪ್ಪ.

ಶಾಲಾ ಮಕ್ಕಳು ಬಂದಾಗ, ನೀವು ಪುಸ್ತಕ ಓದುವುದು ಮಾತ್ರವಲ್ಲ, ನೀವು ಓದಿದ ಭಾಗದ ಮುಖ್ಯಾಂಶಗಳನ್ನು ಬರೆದು ಹೋಗಿ ಎಂದು ಹೇಳುತ್ತಾರೆ. ಹೀಗೆ ವಿವರ ಟಿಪ್ಪಣಿ ಪರಿಚಯ ಬರೆಯುವುದಕ್ಕಾಗಿ 2018 ರಿಂದ ಒಂದು ದಾಖಲಾತಿ ಪುಸ್ತಕವನ್ನೂ ಇಟ್ಟಿದ್ದಾರೆ. ಅದರಲ್ಲಿ ಪುಸ್ತಕ ಓದಿದವರು ಅಭಿಪ್ರಾಯ ಬರೆದು ಹೋಗುತ್ತಾರೆ. ಈತನಕ 300 ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ಅಭಿಪ್ರಾಯ, ತಮ್ಮ ಹೆಸರು ಮತ್ತು ಶಾಲೆಯ ವಿಳಾಸವನ್ನು ಬರೆದು ಹೋಗಿದ್ದಾರೆ.

ಕನಿಷ್ಠ ಒಂದು ಪುಸ್ತಕದ 10 ಪುಟ ಓದಿ, ಅದರ ಬಗ್ಗೆ ಒಂದು ಟಿಪ್ಪಣಿ ಬರೆದರೆ ಹೇರ್ ಕಟ್‌ಗೆ 80 ರೂ ಇದ್ದರೆ. 30 ರೂ ರಿಯಾಯಿತಿ ಕೊಡುವುದಾಗಿ ಹೇಳಿ 2020 ರ ಹೊಸ ವರ್ಷವನ್ನು ಆಚರಿಸಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಮರಿಯಪ್ಪನವರ ಸಲೂನ್ ಲೈಬ್ರರಿಯ ಫೋಟೋ ವೈರಲ್ ಆಗುವುದಕ್ಕಿಂತ ಮೊದಲು ಆರು ವರ್ಷ ಯಾವುದೇ ಪ್ರಚಾರ ಬಯಸದೆ ಮರಿಯಪ್ಪ ತನ್ನ ಸಲೂನಲ್ಲಿ ಓದು ಅಭಿಯಾನ ಶುರುಮಾಡಿದ್ದರು.

ಮರಿಯಪ್ಪನ ಪುಸ್ತಕ ಪ್ರೀತಿ ನೋಡಿ ಪ್ರಸಿದ್ಧ ಪುಸ್ತಕ ಪ್ರಕಾಶನ Hatchette Indiaದವರು ಒಂದಷ್ಟು ಇಂಗ್ಲೀಷ್ ಪುಸ್ತಕಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಇದರಿಂದ ಆ ತನಕ ಬರಿ ತಮಿಳು ಪುಸ್ತಕ ಇಟ್ಟಿದ್ದ ಮರಿಯಪ್ಪ ಇದೀಗ ಇಂಗ್ಲೀಷ್ ಪುಸ್ತಕಗಳನ್ನು ಇಟ್ಟಿದ್ದಾರೆ. ತೂತುಕುಡಿ ಎಂ.ಪಿ. ಕನಿಮೋಜಿಯವರು 50 ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ಇದೀಗ ಮರಿಯಪ್ಪನ ಸಲೂನಿನಲ್ಲಿ 900 ರಷ್ಟು ವೈವಿಧ್ಯಮಯ ತಮಿಳು, ಇಂಗ್ಲೀಷ್ ಪುಸ್ತಕಗಳ ಸಂಗ್ರಹವಾಗಿದೆ. ನಿರಂತರವಾಗಿ ಓದುತ್ತಿದ್ದರೆ ಹೊಸ ಹೊಸ ಆಲೋಚನೆಗಳು ಬರುತ್ತವೆ ಎಂದು ಮರಿಯಪ್ಪ ಹೇಳುತ್ತಾರೆ.

ತನ್ನ ವಿದ್ಯಭ್ಯಾಸ ಕುಂಟಿತವಾದರೂ ಬೇರೆಯವರು ಓದಬೇಕು, ಓದಿ ಜ್ಞಾನ ಸಂಪಾದಿಸಬೇಕೆಂದು ಕನಸುವ ಪೊನ್ನ ಮರಿಯಪ್ಪನವರ ನಡೆಯಿಂದ ಸೆಲೂನ್ ಶಾಪ್‌ನ ಸ್ಥಾಪಿತ ಕಲ್ಪನೆಯನ್ನೆ ಹೊಡೆದು ಹಾಕಿದ್ದಾರೆ.

(ಕೃಪೆ): ದ ಹಿಂದು, ಮೂಲ: ಸೋಮ ಬಸು,
**ಅನುವಾದ: ಅರುಣ್ ಜೋಳದಕೂಡ್ಲಿಗಿ**

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**24–09–2024 – ಮಂಗಳವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೃಘಶಿರ |
| ಯೋಗ | : ವ್ಯತಾಪತಾ |
| ಕರಣ | : ಭವ |
| ಸೂರ್ಯೋದಯ | : 06:17:25 |
| ಸೂರ್ಯಾಸ್ತ | : 18:19:50 |
| ರಾಹು ಕಾಲ | : 15:16–16:50 |
| ಯಮಘಂಡ ಕಾಲ | : 09:18–10:48 |
| ಗುಳಿಕ ಕಾಲ | : 12:19–13:49 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 23–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10548 ಕ್ಯುಸೆಕ್ |
| ಹೊರ ಹರಿವು | 10144 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1620.06 ಅಡಿ |
| ಒಳ ಹರಿವು | 3776 ಕ್ಯುಸೆಕ್ |
| ಹೊರ ಹರಿವು | 9872 ಕ್ಯುಸೆಕ್ |
| ಸಾಮರ್ಥ್ಯ | 61.490 ಟಿಎಂಸಿ |

# ಮನೆ ಬಾಗಿಲು ತೆರೆಯಲು ಭಯ ಕೋತಿ ಹಾವಳಿಗೆ ಜನ ತತ್ತರ

## ಸರ್ಕಾರಿ ಆಸ್ಪತ್ರೆ, ಥಿಯಾಸಾಫಿಕಲ್ ಲಾಡ್ಜ್, ಪ್ರವಾಸಿ ಮಂದಿರ ಬಳಿ ಹೆಚ್ಚಿದ ಮಂಗಗಳ ಹಾವಳಿ ಹಾಲಿನ ಪ್ಯಾಕೇಟ್, ಪತ್ರಿಕೆ ಹೊತ್ತೋಯ್ದ ವಾನರಗಳು । ವಿತರಕ, ಮನೆಯವರ ನಡುವೆ ವಾಗ್ವಾದ

■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಸರ್ಕಾರಿ ಆಸ್ಪತ್ರೆ, ಥಿಯಾಸಾಫಿಕಲ್ ಲಾಡ್ಜ್ ಹಾಗೂ ಪ್ರವಾಸಿ ಮಂದಿರದ ಸುತ್ತಮುತ್ತ ಮಂಗಗಳ ಹಾವಳಿ ಹೆಚ್ಚಾಗಿದ್ದು ಈ ಭಾಗದಲ್ಲಿ ವೃದ್ಧರು, ಮಕ್ಕಳು, ಮಹಿಳೆಯರು ಭಯದಿಂದ ಓಡಾಡುವ ಸ್ಥಿತಿ ನಿರ್ಮಾಣವಾಗಿದೆ.

ಈ ಭಾಗದಲ್ಲಿ ಮನೆ ಬಾಗಿಲು ತೆರೆದು ಮುಚ್ಚಲು ಮೈ ಮರೆತರೆ, ಕ್ಷಣ ಮಾತ್ರದಲ್ಲಿ ಮಂಗಗಳು ಮನೆಯನ್ನು ಪ್ರವೇಶಿಸಿ ಮನೆಯಲ್ಲಿನ ಹಣ್ಣು,ಕಾಯಿ, ಕಾಳು–ಕಡಿಗಳನ್ನು ಹೊತ್ತುಯುತ್ತಿವೆ, ಈ ವೇಳೆ ಇವುಗಳನ್ನು ಎದುರಿಸಲು ಹೋದರೆ, ತಿರುಗಿ ಬಾಯ್ತೆರೆದು ಮೈ ಮೇಲೆ ಎರಗಲು ಮುಂದಾಗುತ್ತವೆ ಎಂಬುದು ಅಲ್ಲಿನ ನಿವಾಸಿಗಳ ದೂರಾಗಿದೆ.

ಮಕ್ಕಳು ಹಣ್ಣು, ಬ್ರೆಡ್ ಸೇರಿದಂತೆ ಇತರೆ ತಿನ್ನುವ ಪದಾರ್ಥಗಳನ್ನು ಕೈಯಲ್ಲಿ ಇಡಿದು ಹೊರಗೆ ಬಂದರೆ, ಜಾತಕ ಪಕ್ಷಿಯಂತೆ, ಕಿಟಿಕಿ, ಕಾಂಪೌಂಡ್ ಮೇಲೆ ಕಾದು ಕುಳಿತ ಅವುಗಳು ಮಕ್ಕಳ ಕೈಯಿಂದ ಕಸಿದುಕೊಂಡು ಟಣ್ಣನೆ ಜಿಗಿಯುತ್ತವೆ. ಏನಾದ್ರು ಅಂಗಡಿಗಳಿಂದ ತರುವಾಗ ಸ್ವಲ್ಪ ಮೈಮರೆತರೆ, ವಸ್ತುಗಳು ಮಂಗಗಳ ಪಾಲಗುತ್ತವೆ. ಬರಿಕೈಯಲಿ ಮನೆಗೆ ಮರಳಬೇಕಾಗಿದೆ. ಬೆಳಗಿನ ಜಾವ ಹಾಲು, ಪೇಪರ್ ಹಾಕಿರುವುದನ್ನು ಮಂಗಗಳು ಹೊತ್ತೊಯ್ದು ಮರುದಿನ ನಿನ್ನೆ ಹಾಲು, ಪೇಪರ್



ಹಾಕಿಲ್ಲವೆಂದು ಅವರೊಂದಿಗೆ ವಾಗ್ವಾದ ನಡೆದ ಉದಾಹರಣೆಗಳು ಇಲ್ಲಿವೆ. ಪಟ್ಟಣದಲ್ಲಿ ಮಂಗಗಳು ಮತ್ತು ನಾಯಿಗಳ ಹಾವಳಿ ಹೆಚ್ಚಾಗಿದ್ದು ಮಕ್ಕಳು ಶಾಲೆಗಳಿಗೆ ಹೋಗಿ ಬರಲು ಹೆದರುತ್ತಿದ್ದಾರೆ. ಅವಘಡ ಸಂಭವಿಸುವ ಮುನ್ನ ಸಂಬಂಧ ಪಟ್ಟ ಅಧಿಕಾರಿಗಳು ಇವುಗಳ ನಿಯಂತ್ರಣಕ್ಕೆ ಕೂಡಲೇ ಮುಂದಾಗ ಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

**ಥಿಯಾಸಾಫಿಕಲ್ ಲಾಡ್ಜ್ ಮತ್ತು ಸರ್ಕಾರಿ ಆಸ್ಪತ್ರೆ ಆವರಣದ ಮರಗಳಲ್ಲಿ ಹಿರಿ ಜೇನು ಮತ್ತು ಮಂಗಗಳ ಕಾಟ ಹೆಚ್ಚಾಗಿದ್ದು ಇವುಗಳ ನಿಯಂತ್ರಣಕ್ಕೆ ಮುಂದಾಗುವಂತೆ ಅರಣ್ಯ ಇಲಾಖೆಗೆ ಹಲವು ಬಾರಿ ಪತ್ರ ಬರೆದರು ಯಾವೊಬ್ಬ ಅಧಿಕಾರಿಯು ಇತ್ತ ತಿರುಗಿ ನೋಡಿಲ್ಲ. ಅರಣ್ಯ ಇಲಾಖೆ ಪಪಂ ಮೇಲೆ, ಪ.ಪಂ. ಅವರು ಅರಣ್ಯ ಇಲಾಖೆ ಮೇಲೆ ತಮ್ಮದಲ್ಲವೆನ್ನುವಂತೆ ಒಬ್ಬರ ಮೇಲೊಬ್ಬರು ಹೇಳುವುದಾಗಿದೆ. ಇನ್ಯಾರಿಗೆ ದೂರಬೇಕು?**

**– ಮಹಾಂತಪ್ಪ**

ಥಿಯಾಸಾಫಿಕಲ್ ಲಾಡ್ಜ್ ಸದಸ್ಯರು, ಕೊಟ್ಟೂರು.

**ಪಟ್ಟಣದಲ್ಲಿ ಕಳೆದ ತಿಂಗಳು 8–9 ಮಂಗಗಳನ್ನು ಈಗಾಗಲೇ ಹಿಡಿದಿದ್ದೇವೆ, ಕೆಲವು ಸಿಕ್ಕಿರಲಿಲ್ಲ. ಪಪಂ ಅಧಿಕಾರಿಗಳೊಂದಿಗೆ ಚರ್ಚಿಸಿ,ಪಟ್ಟಣ ಪಂಚಾಯತಿ ಅವರು ಹಿಡಿಯುವ ಖರ್ಚು ಭರಿಸಿದರೆ ತಜ್ಞರನ್ನು ಕರಸಿ, ಉಳಿದ ಮಂಗಗಳನ್ನು ಹಿಡಿಯಲು ಮುಂದಾಗುವೆವು.**

**– ವೆಂಕಟೇಶ್.**

ಉಪವಲಯ ಅರಣ್ಯ ಅಧಿಕಾರಿ, ಕೂಡ್ಲಿಗಿ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ಸೆ.26ಕ್ಕೆ । ಪ್ರಗತಿ ಪರಿಶೀಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಜಯ ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗಳಾದ ನವೀನ್‌ರಾಜ್ ಸಿಂಗ್ ಅವರು ಸೆಪ್ಟಂಬರ್ 26 ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11.30ಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 3 ಗಂಟೆಗೆ ಜಿಲ್ಲೆಯ ವಿವಿಧೆಡೆ ಸ್ಥಳ ಪರಿವೀಕ್ಷಣೆ ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

## ರಾಜ್ಯ ಅನುದಾನಿತ ಪ.ಪೂರ್ವ ಕಾಲೇಜುಗಳ ನೌಕರರ ಸಂಘದ ಜಿಲ್ಲಾ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘ, ವಿಜಯನಗರ ಜಿಲ್ಲಾ ಘಟಕಕ್ಕೆ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಆಯ್ಕೆ ಸೋಮವಾರ ನಡೆಯಿತು.


ಗೌರವಧ್ಯಕ್ಷರಾಗಿ ಹೊಸಪೇಟೆ ವಿಜಯನಗರ ಪಿಯು ಕಾಲೇಜಿನ ಪ್ರಾಚಾರ್ಯ ಮಲ್ಲಿಕಾರ್ಜುನ ಗೌಡ್ರು, ಹರಪನಹಳ್ಳಿ ಎಸ್,ಯು.ಜೆ.ಎಂ. ಪಿಯು ಕಾಲೇಜ್ ಪ್ರಾಚಾರ್ಯ ಗುರುಸ್ವಾಮಿ ಬಿ.ಎಂ., ಅಧ್ಯಕ್ಷರಾಗಿ ವಿಜಯನಗರ ಕಾಲೇಜಿನ ಉಪನ್ಯಾಸಕ ಪ್ರಭುಸ್ವಾಮಿ.ಟಿ.ಎಂ., ಉಪಾಧ್ಯಕ್ಷರಾಗಿ ಖಾನಮಡುಗು ನಾಗಲಿಂಗಪ್ಪ, ಹಡಗಲಿಯ ಅಮರೇಗೌಡ ಪಾಟೀಲ್, ಸಾಸುವೆಹಳ್ಳಿ ಪ್ರಸನ್ನಕುಮಾರ್, ಉಜ್ಜಿನಿಯ ತಿಪ್ಪೇಸ್ವಾಮಿ ಬಿ.ಪಿ., ಪ್ರಧಾನ ಕಾರ್ಯದರ್ಶಿಯಾಗಿ ಕೂಡ್ಲಿಗಿ ಸಿದ್ದೇಶ್ ಬಿ.ಎಂ., ಕೋಶಾಧ್ಯಕ್ಷರಾಗಿ ಹೊಸಪೇಟೆ ಹೆಚ್.ಎಂ.ನಿರಂಜನ್, ಸಹಕಾರ್ಯದರ್ಶಿಗಳಾಗಿ, ಹರಪನಹಳ್ಳಿ ರಾಮಣ್ಣ ಕಲ್ಯಾಣದವರ, ರವಿಂದ್ರ ಕೆ.ಬಿ., ಹಗರಿಬೊಮ್ಮನಹಳ್ಳಿ ಜಯಪ್ರಕಾಶ, ಕೊಟ್ಟೂರು ಪ್ರಶಾಂತ್ ಕುಮಾರ್, ಎಂ.ಹೆಚ್., ಕೂಡ್ಲಿಗಿ ವೀರೇಶ್, ಹೊಸಪೇಟೆ ಕನಕರಾಯ.ವಿ., ಸಂಘಟನಾ ಕಾರ್ಯದರ್ಶಿಗಳಾಗಿ ಕೂಡ್ಲಿಗಿ ಸತೀಶ್, ಹರಪನಹಳ್ಳಿ ಕೊಟ್ರೇಶ್, ಹೊಸಪೇಟೆ ಶರಣಬಸವ.ಕೆ., ಖಾನಹೊಸಹಳ್ಳಿ ಪಾಲ್ತುರು ಬಸವರಾಜ್, ಹೊಸಪೇಟೆ ರಮೇಶ್ ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ಅನುದಾನಿತ ಪ.ಪೂ.ಕಾಲೇಜುಗಳ ನೌಕರರ ಸಂಘದ ವಿಜಯನಗರ ಜಿಲ್ಲಾಧ್ಯಕ್ಷ ಪ್ರಭುಸ್ವಾಮಿ ಟಿ.ಎಂ.ತಿಳಿಸಿದ್ದಾರೆ.

## ಸೆ.25 ರಂದು ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಗ್ರಾಮೀಣ ವ್ಯಾಪ್ತಿಯ 110/11 ಕೆ.ವಿ ದಕ್ಷಿಣ ಉಪ–ಕೇಂದ್ರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಸೆ.25 ರಂದು 110/11 ಕೆ.ವಿ ಉತ್ತರ ವಿದ್ಯುತ್ ಉಪಕೇಂದ್ರದಿಂದ ಸರಬರಾಜು ಆಗವ ಬಳ್ಳಾರಿ ಗ್ರಾಮೀಣ ವ್ಯಾಪ್ತಿಯ ಎಫ್–5 ಫೀಡರ್ ಸಂಗನಕಲ್ಲು ನಗರ ಮಾರ್ಗದ ಸಂಗನಕಲ್ಲು ಗ್ರಾಮ ಸೇರಿದಂತೆ ಮುಂತಾದ ಕಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಅಧಿಕಾರಿ ತಿಳಿಸಿದ್ದಾರೆ.

# ತುಂಗಭದ್ರಾ ಜಲಾಶಯದ ಗೇಟ್‌ಗಳ ಬದಲಾವಣೆಗೆ ಒತ್ತು: ಡಿಕೆ ಶಿವಕುಮಾರ್



■ **ಹಂಪಿ ಟೈಮ್ಸ್ ಕೊಪ್ಪಳ**

ತುಂಗಭದ್ರಾ ಜಲಾಶಯದ ಎಲ್ಲ ಗೇಟ್‌ಗಳನ್ನು ಬದಲಾವಣೆ ಮಾಡಲು ಈಗಾಗಲೇ ತಾಂತ್ರಿಕ ತಂಡ ರಚಿಸಲಾಗಿದೆ. ತುಂಗಭದ್ರಾ ಆಣೆಕಟ್ಟಿನ ರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೊಪ್ಪಳ ತಾಲೂಕಿನ ಮುನಿರಾಬಾದ್ ಹೈಸ್ಕೂಲ್ ಆವರಣದಲ್ಲಿ ಜಲಸಂಪನ್ಮೂಲ ಇಲಾಖೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಭಾನುವಾರ ಹಮ್ಮಿಕೊಂಡಿದ್ದ, ತುಂಗಭದ್ರಾ ಆಣೆಕಟ್ಟಿನ ಗೇಟ್‌ನ್ನು ವಾರದೊಳಗೆ ನಿರ್ಮಿಸಿ, ಅಳವಡಿಸಿದ ಅಧಿಕಾರಿಗಳು, ತಂತ್ರಜ್ಞರು, ಸಿಬ್ಬಂದಿಗಳು ಹಾಗೂ ಗೇಟ್ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳಿಗೆ ಅಭಿನಂದಿಸಿ ಮಾತನಾಡಿದರು. ತುಂಗಭದ್ರಾ ಜಲಾಶಯಕ್ಕೆ ಪರ್ಯಾಯವಾಗಿ ಸಮನಾಂತರ ಜಲಾಶಯ ನಿರ್ಮಾಣ ಅತ್ಯವಶ್ಯವಾಗಿದ್ದು, ನವಲಿ ಸಮನಾಂತರ ಜಲಾಶಯಕ್ಕಾಗಿ ಸುಮಾರು 15 ಸಾವಿರ ಎಕರೆ ಜಮೀನು ಬೇಕಾಗುತ್ತದೆ. ಇದಕ್ಕಾಗಿ ರೈತರು ಸಹಕರಿಸಬೇಕು ಎಂದರು.

ಗಂಗಾ ಸ್ನಾನಂ ತುಂಗಾ ಪಾನಂ ಎಂಬ ಮಾತಿನಂತೆ ತುಂಗಾ ನದಿಯ ನೀರು ಪವಿತ್ರವಾಗಿದೆ. ಆಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳಾಗಿವೆ ಎಂದು ಜವಾಹರಲಾಲ್ ನೆಹರು ರವರು ತಿಳಿಸಿದ್ದಾರೆ. ಈ ಭಾಗದ ರೈತರ ಜೀವ ಜಲ ತುಂಗಭದ್ರಾ ಆಣೆಕಟ್ಟಿನ ಕ್ರೆಸ್ಟ್ ಗೇಟ್ ಚೈನ್ ಲಿಂಕ್ ಕಟ್ ಆದಾಗ ರೈತರು ಆತಂಕದಲ್ಲಿದ್ದರು. ಸರ್ಕಾರ ರೈತರ ಬೆನ್ನಿಗೆ ನಿಂತು ಸ್ಟಾಪ್ ಗೇಟ್ ಅಳವಡಿಸಿ, ನೀರನ್ನು ಸಂರಕ್ಷಿಸಿದ್ದೇವೆ. ಸ್ಟಾಪ್‌ಗೇಟ್ ಅಳವಡಿಕೆಗಾಗಿ ಅಧಿಕಾರಿಗಳು, ತಂತ್ರಜ್ಞರು, ಸಿಬ್ಬಂದಿ ಹಾಗೂ ಗೇಟ್ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳು ಶ್ರಮಿಸಿದ್ದು, ಅವರೆಲ್ಲರ ಸಾಧನೆಗೆ ಸರ್ಕಾರ ಅಭಿನಂದಿಸುತ್ತಿದೆ ಎಂದು ಹೇಳಿದರು.

ರಾಜ್ಯದ ಕೆ.ಆರ್.ಎಸ್., ಆಲಮಟ್ಟಿ ಅಣೆಕಟ್ಟುಗಳಿಗೆ ಈಗಾಗಲೇ ಬಾಗಿನ ಅರ್ಪಣೆ ಮಾಡಿದ್ದೇವೆ. ಈಗ ತುಂಗಭದ್ರಾ ಜಲಾಶಯಕ್ಕೂ ಬಾಗಿನ ಅರ್ಪಿಸಲಾಗಿದೆ. ರೈತರ ಬೆಳೆಗಳ ರಕ್ಷಣೆಗೆ ಅವಶ್ಯವಿರುವ ನೀರನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ತಂಗಡಗಿ ಅವರು ಮಾತನಾಡಿ, ಈ ಭಾಗಕ್ಕೆ ಸೆ.22 ಸಂಭ್ರಮದ ದಿನವಾಗಿದೆ. ಮುರಿದುಹೋದ ಕ್ರೆಸ್ಟ್ ಗೇಟ್ ದುರಸ್ತಿಗೆ ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಂಡು ನೀರನ್ನು ಉಳಿಸುವಂತಹ ಕೆಲಸ ಮಾಡಿದೆ. ತುಂಗಭದ್ರಾ ಜಲಾಶಯವು ಈ ಭಾಗದ ರೈತರ ಜೀವನಾಡಿಯಾಗಿದ್ದು, ಆಣೆಕಟ್ಟಿನ ಎಲ್ಲಾ 33 ಕ್ರೆಸ್ಟ್ ಗೇಟ್‌ಗಳ ಬದಲಾವಣೆ ಆಗಬೇಕಿದೆ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ರಾಘವೇಂದ್ರ ಹಿಟ್ನಾಳ್ ಮಾತನಾಡಿ, ತುಂಗಭದ್ರಾ ಜಲಾಶಯದ ಕ್ರೆಸ್ಟ್ ಗೇಟ್–19ರ ಚೈನ್ ಲಿಂಕ್ ಕಟ್‌ಆಗಿ ನೀರು ಪೋಲಾಗುತ್ತಿತ್ತು. ಇದರಿಂದ ರೈತರು ಆತಂಕ ಪಡುತ್ತಿದ್ದರು. ಮುಖ್ಯ ಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು, ಸಚಿವರು ರೈತರಿಗೆ ಧೈರ್ಯ ತುಂಬಿ ದುರಸ್ತಿ ಕಾರ್ಯವು ಶೀಘ್ರ ಪೂರ್ಣಗೊಳ್ಳಲಿದೆ ಎಂದು ಭರವಸೆ ನೀಡಿದ್ದರು. ಅದರಂತೆ ಗೇಟ್ ಅಳವಡಿಕೆ ಕಾರ್ಯ ಯಶಸ್ವಿಯಾಯಿತು. ಇದರ ಫಲವಾಗಿ ಈಗ ಸುಮಾರು 102 ಟಿಎಂಸಿ ನೀರನ್ನು ರಕ್ಷಿಸಲಾಗಿದೆ ಎಂದರು.

ನಮ್ಮ ಸರ್ಕಾರವು ಬಡವರಿಗಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಯಥಾವತ್ತಾಗಿ ಜಾರಿ ತಂದಿದೆ. ಅಳವಂಡಿ–ಬೆಟಗೇರಿ, ಸಿಂಗಟಾಲೂರು, ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಗಳನ್ನು ಜಾರಿಗೆ ಮಾಡಬೇಕು. ಕೊಪ್ಪಳ ಜಿಲ್ಲೆಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನೀಡಬೇಕು ಹಾಗೂ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಸಮಾರಂಭದಲ್ಲಿ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ, ವಸತಿ, ವಕ್ಸ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರಡ್ಡಿ, ಶಾಸಕರಾದ ಹಂಪನಗೌಡ ಬಾದರ್ಲಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರ ಶಾಸಕ ಜೆ.ಎನ್.ಗಣೇಶ, ಇತರರು ಇದ್ದರು.

**SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ**

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC – ಕನ್ನಡ

## ವಿಷಯ : ಕನ್ನಡ(ಪ್ರ.ಭಾ) ಪದ್ಯ – ಛಲಮನೆ ಮೆರೆವೆಂ

### ಕವಿ ಪರಿಚಯ – ರನ್ನ (ಆಗಸ್ಟ್–2024) :

ಮಹಾಕವಿ ರನ್ನನು ಕ್ರಿ.ಶ. ಸುಮಾರು 949ರಲ್ಲಿ(10 ನೇ ಶತಮಾನ) ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಸಾಹಸ ಭೀಮ ವಿಜಯಂ( ಗದಾಯುದ್ಧ), ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. 'ರನ್ನ ಕಂದ' ಎಂಬ ನಿಘಂಟು ರಚಿಸಿದ್ದಾಗಿ ತಿಳಿದು ಬರುತ್ತದೆ. ಇವನಿಗೆ ತೈಲಪನು' ಕವಿ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದನು. ಇವನು 'ಕನ್ನಡದ ರತ್ನತ್ರಯ'ರಲ್ಲಿ ಒಬ್ಬನಾಗಿದ್ದಾನೆ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ನಿಮಗೆ ನಮಸ್ಕರಿಸಿ ಹೋಗಲು ಬಂದೇನಷ್ಟೇ ಎಂದು ದುರ್ಯೋಧನನು ಯಾರಿಗೆ ಹೇಳುವನು?**

**ಉತ್ತರ:–** ನಿಮಗೆ ನಮಸ್ಕರಿಸಿ ಹೋಗಲು ಬಂದೇನಷ್ಟೆ ಎಂದು ದುರ್ಯೋಧನನು ಭೀಷ್ಮನಿಗೆ ಹೇಳುವನು.

**2. ದಿನಪಸುತ ಎಂದರೆ ಯಾರು ?(ಜೂನ್–2024)**

**ಉತ್ತರ:–** ದಿನಪಸುತ ಎಂದರೆ ಕರ್ಣ.

**3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನನು ಹೇಳುತ್ತಾನೆ ?**

**ಉತ್ತರ:–** ಅರ್ಜುನ ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

**4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?**

**ಉತ್ತರ:–** ಛಲವನ್ನೇ ಮೆರೆಯುವುದಾಗಿ ನಿರ್ಧರಿಸುವವನು ದುರ್ಯೋಧನ.

**5. ಅಂತಕಾತ್ಮಜ ಎಂದರೆ ಯಾರು ?**

**ಉತ್ತರ:–** ಅಂತ ಕಾತ್ಮಜ ಎಂದರೆ ಧರ್ಮರಾಯ.

**6.ದುರ್ಯೋಧನ ತಾನು ಹೋರಾಡುತ್ತಿರುವುದು ಏಕೆ ಎಂದು ಭೀಷ್ಮನಿಗೆ ಹೇಳುತ್ತಾನೆ ? (ಮಾರ್ಚ್–2020)**

**ಉತ್ತರ:–** ದುರ್ಯೋಧನ ತಾನು ಹೋರಾಡುತ್ತಿರುವುದು ಛಲಕ್ಕಾಗಿ ಎಂದು ಬಭೀಷ್ಮರಿಗೆ ಹೇಳುತ್ತಾನೆ.

**7. ತಂದೆ ತಾಯಿಯರ ಸಲಹೆಯಂತೆ ಭೀಷ್ಮರ ಬಳಿ ಸಲಹೆ ಕೇಳಲು ಬಂದವನು ಯಾರು ? (ಜುಲೈ–2021)**

**ಉತ್ತರ:–** ತಂದೆ ತಾಯಿಯರ ಸಲಹೆಯಂತೆ ಭೀಷ್ಮರ ಬಳಿ ಸಲಹೆ ಕೇಳಲು ಬಂದವನು ದುರ್ಯೋಧನ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**1. ಪಾರ್ಥಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ? ಅಥವಾ ಅಂತ ಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು ?**

**ಅಥವಾ ಪಾರ್ಥ– ಭೀಮರನ್ನು ಕೊಂದ ಬಳಿಕ ಯುಧಿಷ್ಠಿರ ನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು? (ಮಾರ್ಚ್–2020, ಮಾರ್ಚ್ –2024, ಜೂನ್ –2024)**

**ಉತ್ತರ:–** ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ಭೀಷ್ಮನು ದುರ್ಯೋಧನಿಗೆ ನೀಡುತ್ತಾನೆ. ಆದರೆ ದುರ್ಯೋಧನ ಇದಕ್ಕೆ ಒಪ್ಪದೇ ನನ್ನ ಪ್ರೀತಿಯ ಗೆಳೆಯ ಕರ್ಣನನ್ನು ಕೊಂದ ಅರ್ಜುನ, ನನ್ನ ಪ್ರೀತಿಯ ತಮ್ಮ ದುಶ್ಯಾಸನನ್ನು ಕೊಂದ ಭೀಮ ಇವರಿಬ್ಬರೂ ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ನಾನು ಸಂಧಿಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದ ಬಳಿಕ, ನನ್ನ ದುಃಖ ಕಡಿಮೆಯಾದ ಮೇಲೆ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುವೆನು ಎಂದು ಹೇಳುತ್ತಾನೆ.

**2. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?**

**ಉತ್ತರ:–** ದುರ್ಯೋಧನನು ಭೀಷ್ಮರನ್ನು ಕುರಿತು " ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವರೇ, ಛಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳು ಭೂಮಿ. ನನ್ನ ಮಿತ್ರನಾದ ಕರ್ಣನು, ಪ್ರೀತಿಯ ತಮ್ಮನಾದ ದುಶ್ಯಾಸನು ಹಾಗೂ ನೂರು ಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧ ಮಾಡಿ ಸತ್ತರು .ಕೋಪವು ಹುಟ್ಟಿ ಹೊರಹೊಮ್ಮಿತು . ಆದ್ದರಿಂದ ಪಾಂಡವರೊಡನೆ ಯುದ್ಧ ಮಾಡಿ ಛಲವನ್ನೇ ಮೆರೆಯುವೆನು "ಎಂದು ಹೇಳಿದನು.

**ಇ) ಪದ್ಯ ಭಾಗವನ್ನು ಕಂಠಪಾಠ ಮಾಡಿರಿ. (ಮಾರ್ಚ್ –2018, ಜೂನ್–2019 )**

ನೆಲಕಿರುವೆನೆಂದು ಬಗೆದಿರೆ ।
ಚಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ ॥
ಳ್ನೆಲನೆನಗೆ ದಿನಪಸುತನಂ ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ ॥

**ನಿನ್ನ ಏಳಿಗೆಗೆ ನೀನೆ ಶಿಲ್ಪಿ । ಗುರಿ ತಲುಪುವವರೆಗೆ ಪರಿಶ್ರಮ ನಿರಂತರವಾಗಿರಲಿ**

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055